# ಜನತಾ ವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಅಕ್ಟೋಬರ್ 12, 2021

ಸಂಪುಟ : 48 ಸಂಚಿಕೆ : 152 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


# ಭರಮಸಾಗರ : ಜಲರಾಶಿಯನ್ನು ಕಣ್ತುಂಬಿಕೊಂಡ ಸಿರಿಗೆರೆ ಶ್ರೀ



ನಾಗರಾಜ ಸಿರಿಗೆರೆ

ಭರಮಸಾಗರ, ಅ.11- ತುಂಗಭದ್ರಾ ನದಿಯಿಂದ ಭರಮಸಾಗರ ಕೆರೆಗೆ ಕಳೆದ ಸೆಪ್ಟೆಂಬರ್ 29ರಂದು ನೀರು ಹರಿದುಬಂದಿದ್ದು, ಸಿರಿಗೆರೆಯ ತರಳಬಾಳು ಬೃಹನ್ಮಠದ ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಸಾವಿರಾರು ಭಕ್ತರ ಜಯಘೋಷಗಳ ನಡುವೆ ಇಂದು ಭರಮಸಾಗರದ ಕೆರೆ ವೀಕ್ಷಿಸಿದರು.

ನಂತರ ನಡೆದ ಸಭೆಯಲ್ಲಿ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾ ಸ್ವಾಮೀಜಿ ಮಾತನಾಡಿ, ಈ ಯೋಜನೆ ಸಾಕಾರಗೊಳ್ಳಲು ಸಿದ್ಧರಾಮಯ್ಯ ಮತ್ತು ಹೆಚ್.ಡಿ. ಕುಮಾರಸ್ವಾಮಿ ಅವರುಗಳ ನೇತೃತ್ವದ ಸರ್ಕಾರಗಳು, ಆನಂತರ ಆಡಳಿತಕ್ಕೆ ಬಂದ ಬಿ.ಎಸ್.ಯಡಿಯೂರಪ್ಪನವರ ಸರ್ಕಾರ ಕಾರಣವಾಗಿದೆ. ಈ ಯೋಜನೆ ಕಾರ್ಯಗತಗೊಳ್ಳಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಧುಸ್ವಾಮಿ, ಸಿ.ಟಿ. ರವಿ, ಗೋವಿಂದ ಕಾರಜೋಳ, ಸಿ. ಸಿ. ಪಾಟೀಲರು ಕಾರಣರು. ಈ ಐದು ಜನ ರಾಜಕೀಯ ಧುರೀಣರು ಮುತ್ತೈದೆಯರು ಇದ್ದಂತೆ ಎಂದು ಬಣ್ಣಿಸಿದ ಶ್ರೀಗಳು,



**ತರಳಬಾಳು ಜಗದ್ಗುರುಗಳಿಗೆ ಭಕ್ತರ ಜಯಘೋಷ**

ಕರ್ನಾಟಕದಲ್ಲಿಯೇ ಇದು ಮಹತ್ವದ ಏತ ನೀರಾವರಿ ಯೋಜನೆಯಾಗಿದೆ. ಇದಕ್ಕೆ ಹಲವರು ಹಗಲು, ಇರುಳು ಶ್ರಮಿಸಿದ್ದಾರೆ. ಕಲ್ಪನಹಳ್ಳಿಯಲ್ಲಿ ಕೊಳವೆ ಮಾರ್ಗ ಹೋಗಲು ವಾಸದ ಮನೆಯನ್ನು ಬಿಟ್ಟುಕೊಟ್ಟವರು ನಿಜವಾಗಿಯು ತ್ಯಾಗಜೀವಿಗಳು. ಅವರಿಗೆ ಎಷ್ಟು ಕೃತಜ್ಞತೆ ಹೇಳಿದರೂ ಸಾಲದು. ಅವರ ತ್ಯಾಗ ಅಭಿನಂದನೀಯ ಎಂದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಂಸದ ಜಿ. ಎಂ. ಸಿದ್ದೇಶ್ವರ ನೀರು, ವಿದ್ಯುತ್, ರಸ್ತೆ, ಗುಣಮಟ್ಟದ ಬೀಜ, ಗೊಬ್ಬರ, ಬೆಳೆಗಳಿಗೆ ಸೂಕ್ತ ಬೆಲೆ ಕೊಟ್ಟರೆ ರೈತರ ಬದುಕು ಹಸನಾಗುತ್ತದೆ ಎಂಬುದು ಜಗದ್ಗುರುಗಳ ಆಶಯ. ಭರಮಸಾಗರದ ಕೆರೆ ತುಂಗಭದ್ರೆಯಿಂದ ಭರ್ತಿಯಾದರೆ 40-50 ಹಳ್ಳಿಗಳ ಅಂತರ್ಜಲ ಹೆಚ್ಚಾಗುತ್ತದೆ. ಇದ ರಿಂದ ಜನ - ಜಾನುವಾರುಗಳಿಗೆ ಅನುಕೂಲ ವಾಗುತ್ತದೆ. ರೈತರು ಉತ್ತಮ ವಾಣಿಜ್ಯ ಬೆಳೆಗಳನ್ನು ಬೆಳೆದು ಸರ್ಕಾರದ ಹೊರೆಯನ್ನು ಕಡಿಮೆ ಮಾಡಬೇಕು. ಆ ಮೂಲಕ ಸರ್ಕಾರದ ಬೊಕ್ಕಸಕ್ಕೆ ಆದಾಯವನ್ನು ಹೆಚ್ಚಿಸು ವಂತಾಗಬೇಕು ಎಂದರು.

ಈ ಕೆರೆ ತುಂಬಿಸುವುದರ ಮೂಲಕ ಶ್ರೀ ಗಳು ಸಾರ್ಥಕ ಕೆಲಸ ಮಾಡಿದ್ದಾರೆ. ಪೂಜ್ಯರು ಕೈ ಹಾಕಿದ ಎಲ್ಲಾ ಕೆಲಸಗಳು ಯಶಸ್ವಿ ಯಾಗುತ್ತವೆ ಎಂಬುದಕ್ಕೆ ಈ ಯೋಜನೆ ಸಾಕ್ಷಿಯಾಗಿದೆ. ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಗೆ ಕಳೆದ ಏಳು ವರ್ಷಗಳ ಹಿಂದೆ ಚಾಲನೆ ನೀಡಿದರೂ ಇಂದಿಗೂ ಪೂರ್ಣ ಗೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದ ಸಂಸದರು, ಮುಂದಿನ ದಿನಗಳಲ್ಲಿ ಶೀಘ್ರವಾಗಿ ಕೆಲಸ ಪೂರೈಸಲು ಕ್ರಮಕೈಗೊಳ್ಳಲಾಗುತ್ತದೆ ಎಂದರು. (2ನೇ ಪುಟಕ್ಕೆ)

## ಮಡದಿಯರಿಗೆ ಬಂಗಾರ ಕೊಡಿಸಿ: ಜಗದ್ಗುರುಗಳ ಸಲಹೆ

ಪ್ರತಿವರ್ಷ ಅಡಿಕೆ ತೋಟ ಉಳಿಸಿಕೊಳ್ಳಲು ಹತ್ತಾರು ಲಕ್ಷ ರೂ.ಗಳು ಖರ್ಚಾಗುತ್ತಿದ್ದವು. ಈಗ ಕೆರೆಗೆ ನೀರು ಬಂದಿರುವುದರಿಂದ ಅಂತರ್ಜಲ ಹೆಚ್ಚಾಗಿ ತೋಟಗಳಲ್ಲಿ ಸಮೃದ್ಧ ಫಸಲು ಬರುತ್ತದೆ. ಈ ಭಾಗದ ಬಹುದಿನಗಳ ಕನಸು ಈಡೇರಿದೆ. ಈಗ ನೀವು ಕೊಳವೆ ಬಾವಿ ಕೊರೆಸಲು ಖರ್ಚು ಮಾಡುತ್ತಿದ್ದ ಹಣವನ್ನು ಬಾರ್ ಗಳಲ್ಲಿ ಖರ್ಚು ಮಾಡುವುದರ ಬದಲು ನಿಮ್ಮ ಮನೆಯ ಒಡತಿಯರಿಗೆ ಬಂಗಾರ ಕೊಡಿಸಿ ಅವರ ಮುಖದಲ್ಲು ಸಂತೋಷ ಉಕ್ಕುವಂತೆ ಮಾಡಿ ಎಂದು ಶ್ರೀಗಳು ಬುದ್ಧಿಮಾತು ಹೇಳಿದರು

ಭರಮಸಾಗರದಿಂದ ರೋಮ್ ನಗರದವರೆಗೂ ಹರಿದ ತುಂಗಭದ್ರೆ

ಜಾಗತಿಕ ತಾಪಮಾನ ಹೆಚ್ಚುತ್ತಿರುವುದರ ಬಗ್ಗೆ ಚರ್ಚಿಸಲು ಕ್ರೈಸ್ತ ಧರ್ಮಗುರು ಪ್ರನ್ಸಿಸ್ ಅವರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳನ್ನೊಳಗೊಂಡ ಜಗತ್ತಿನ 37 ಜನ ಧರ್ಮಗುರುಗಳು ಮತ್ತು ಪರಿಸರ ವಿಜ್ಞಾನಿಗಳನ್ನು ಜಾಗತಿಕ ಶೃಂಗ ಸಭೆಗೆ ಆಹ್ವಾನಿಸಿದ್ದರು. ಕೋವಿಡ್ ಕಾರಣಕ್ಕೆ ಇಟಲಿ ಸರ್ಕಾರದವರು (2ನೇ ಪುಟಕ್ಕೆ)

### ಪೂಜ್ಯರ ಕಾರ್ಯ ಪಠ್ಯವಾಗಲಿ

ಭರಮಣ್ಣ ನಾಯಕ ಕೆರೆ ಕಟ್ಟಿಸಿ ಸಾರ್ಥಕ ಕೆಲಸ ಮಾಡಿದಂತೆ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಕೆರೆ ತುಂಬಿಸುತ್ತಿರುವುದು ನಮ್ಮೆಲ್ಲರ ಪುಣ್ಯ. ಆಧುನಿಕ ಭಗೀರಥರಾದ ಇಂತಹ ಪೂಜ್ಯರನ್ನು ಪಡೆದ ನಾವೇ ಧನ್ಯರು. ಪೂಜ್ಯರ ಈ ಸೇವೆಯ ಬಗ್ಗೆ ಶಾಲಾ ಮಕ್ಕಳು ಓದುವಂತಾಗಲು ಪಠ್ಯಪುಸ್ತಕಗಳಲ್ಲಿ ಪಠ್ಯವಾಗಬೇಕು.

**- ಜಿ.ಎಂ. ಸಿದ್ದೇಶ್ವರ,** ಸಂಸದರು, ದಾವಣಗೆರೆ

### ಕಂಚಿನ ಪ್ರತಿಮೆ ಸ್ಥಾಪನೆಯಾಗಲಿ

ಅಪಾರ ವಿದ್ವತ್ ಹೊಂದಿರುವ ತರಳಬಾಳು ಜಗದ್ಗುರುಗಳು 43 ಕೆರೆಗಳಿಗೆ ಹೇಗೆ ನೀರು ಹರಿಸಬೇಕೆಂಬುದನ್ನು ಸ್ವತಃ ಪೂಜ್ಯರೇ ತಮ್ಮ ಕಂಪ್ಯೂಟರ್ ನಲ್ಲಿ ನಕ್ಷೆ ಸಿದ್ಧಪಡಿಸಿದ್ದರು. ಇಂತಹ ಪೂಜ್ಯರ ಆಳೆತ್ತರದ ಕಂಚಿನ ಪ್ರತಿಮೆ ಸ್ಥಾಪಿಸಬೇಕು. ಇದಕ್ಕಾಗಿ ಎರಡು ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದೇನೆ.

**- ಎಂ. ಚಂದ್ರಪ್ಪ, ಶಾಸಕರು,** ಅಧ್ಯಕ್ಷರು, ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

### ಶ್ರೀಗಳು ಕಾಲಿಟ್ಟ ನಾಡು ಬಂಗಾರದ ಬೀಡು

ಈ ಯೋಜನೆಗೆ ಬೇಕಾದ ಹಣವನ್ನು ಮಂಜೂರು ಮಾಡಿಸಲು ಸಾಧ್ಯವಾಗದಿದ್ದರೆ, ನಾನು ನನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲು ತಯಾರಾಗಿದ್ದೆ. ಯಡಿಯೂರಪ್ಪನವರು ಪೂಜ್ಯರ ಜನಪರ ಕಾಳಜಿ ಬಗ್ಗೆ ಅಪಾರ ಗೌರವವುಳ್ಳವರು. ಪೂಜ್ಯರ ಇಂಗಿತವನ್ನು ಅರ್ಥಮಾಡಿಕೊಂಡು ಈ ಯೋಜನೆಗೆ ಬೇಕಾದ ಹಣವನ್ನು ಬಿಡುಗಡೆ ಮಾಡಿದ್ದಾರೆ. ಶ್ರೀಗಳು ಕಾಲಿಟ್ಟ ನಾಡು ಬಂಗಾರದ ಬೀಡು.

**- ಎಸ್.ವಿ. ರಾಮಚಂದ್ರ,** ಶಾಸಕರು, ಜಗಳೂರು.

### ಕೆರೆಗೆ ತರಳಬಾಳು ಶ್ರೀ ಹೆಸರಿಡಬೇಕು

ಮೂರು ಜನ ಮುಖ್ಯಮಂತ್ರಿಗಳು ಶ್ರೀಗಳ ಬಗ್ಗೆ ಅಪಾರ ಗೌರವವುಳ್ಳವರು. ಶ್ರೀಗಳ ಜನಪರ ಕಾಳಜಿಗೆ ಎಲ್ಲಾ ಸರ್ಕಾರಗಳು ಸದಾ ಸಹಕಾರ ನೀಡುತ್ತಿವೆ. ಇಂತಹ ಪೂಜ್ಯರ ಹೆಸರನ್ನು ಈ ಭರಮಸಾಗರ ಕೆರೆಗೆ ನಾಮಕರಣ ಮಾಡಬೇಕು. ಮತ್ತು ಪೂಜ್ಯರ ಪ್ರತಿಮೆ ಸ್ಥಾಪಿಸಬೇಕು.

**- ಎಚ್. ಆಂಜನೇಯ,** ಮಾಜಿ ಸಚಿವರು

# ಹಬ್ಬಗಳಲ್ಲಿ ಮೆರವಣಿಗೆ ನಿಷೇಧ

## ಕಡ್ಡಾಯವಾಗಿ ಸರ್ಕಾರದ ಮಾರ್ಗಸೂಚಿ ಪಾಲಿಸಲು ಡಿಸಿ ಸೂಚನೆ

ದಾವಣಗೆರೆ, ಅ.11- ಕೋವಿಡ್ ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ದಸರಾ ಹಾಗೂ ಈದ್‌ಮಿಲಾದ್ ಹಬ್ಬಗಳ ಆಚರಣೆಗಾಗಿ ಹೊರಡಿಸಿರುವ ಮಾರ್ಗಸೂಚಿ ಯನ್ನು ಪಾಲಿಸಿಕೊಂಡು, ಸೌಹಾರ್ದಯುತವಾಗಿ ದಸರಾ ಹಾಗೂ ಈದ್‌ಮಿಲಾದ್ ಹಬ್ಬಗಳನ್ನು ಆಚರಿಸಬೇಕು. ಯಾವುದೇ ಸಾಮೂಹಿಕ ಮೆರವಣಿಗೆಗೆ ಅವಕಾಶವಿಲ್ಲ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ದಸರಾ, ಈದ್‌ಮಿಲಾದ್ ಹಬ್ಬಗಳ ಆಚರಣೆ ನಿಮಿತ್ಯ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಲಾಗಿದ್ದ ನಾಗರಿಕ ಸೌಹಾರ್ದ ಸಮನ್ವಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೋವಿಡ್ ಇಲ್ಲದ ಸಂದರ್ಭಗಳಲ್ಲಿ ನಾವು ಎಲ್ಲ ಹಬ್ಬಗಳನ್ನು ಸಾಂಪ್ರದಾಯಿಕವಾಗಿ ವಿಜೃಂಭಣೆಯ ಮೆರವಣಿಗೆ ಸಹಿತ ಆಚರಿಸಿದ್ದೇವೆ. ಆದರೆ ಕೋವಿಡ್ ಸೋಂಕು ಕಳೆದೆರಡು ವರ್ಷಗಳಿಂದ ಇಂತಹ

**ಜಿಲ್ಲೆಯಲ್ಲಿ ಕೋವಿಡ್ ಪ್ರಕರಣಗಳು ನಿಯಂತ್ರಣದಲ್ಲಿದ್ದು, ದಸರಾ ಹಾಗೂ ಈದ್ ಮಿಲಾದ್ ಹಬ್ಬಗಳಲ್ಲಿ ಮೆರವಣಿಗೆ ನಡೆಸಲು ಅವಕಾಶ ಕಲ್ಪಿಸುವಂತೆ ಹಿಂದೂ-ಮುಸ್ಲಿಂ ಮುಖಂಡರು ಸಭೆಯಲ್ಲಿ ಮನವಿ ಮಾಡಿ ಕೊಂಡರು. ಆದರೆ ಜಿಲ್ಲಾಧಿಕಾರಿಗಳು ಮತ್ತು ಎಸ್‌ಪಿ ಅವರು ಸರ್ಕಾರದ ಮಾರ್ಗಸೂಚಿ ಯಂತೆ ಮೆರವಣಿಗೆಗೆ ಅವಕಾಶವಿಲ್ಲ ಎಂದು ಮನವರಿಕೆ ಮಾಡಿಕೊಟ್ಟರು.**

ವಿಜೃಂಭಣೆಯ ಆಚರಣೆಗಳಿಗೆ ತಡೆಹಾಕಿದ್ದು, ಎಲ್ಲರ ಆರೋಗ್ಯ ದೃಷ್ಟಿಯಿಂದ, ಸರ್ಕಾರ ಕೋವಿಡ್ ನಿಯಂ ತ್ರಣಕ್ಕಾಗಿ ಹೊರಡಿಸಿರುವ ಮಾರ್ಗಸೂಚಿಗಳನ್ನು ಎಲ್ಲರೂ ಪಾಲಿಸುವುದು ಅನಿವಾರ್ಯವಾಗಿದೆ (2ನೇ ಪುಟಕ್ಕೆ)



ಜಿಲ್ಲಾಡಳಿತದಲ್ಲಿ ಸೋಮವಾರ ನಡೆದ ನಾಗರಿಕ ಸೌಹಾರ್ದ ಸಮನ್ವಯ ಸಭೆ

# ದಾಖಲೆ ಕಲ್ಲಿದ್ದಲು ಉತ್ಪಾದನೆಯಾದರೂ ಕೊರತೆ

ನವದೆಹಲಿ, ಅ. 11 – ದೇಶದಲ್ಲಿ ಕಲ್ಲಿದ್ದಲು ಕೊರತೆಯಾಗಿರುವ ವರದಿಗಳ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಇಂಧನ ಸಚಿವ ಆರ್.ಕೆ. ಸಿಂಗ್ ಹಾಗೂ ಕಲ್ಲಿದ್ದಲು ಸಚಿವ ಪ್ರಹ್ಲಾದ್ ಜೋಷಿ ಜೊತೆ ಚರ್ಚೆ ನಡೆಸಿದ್ದಾರೆ.

ಮೂವರು ಸಚಿವರು ಒಂದು ಗಂಟೆ ಕಾಲಕ ಚರ್ಚೆ ನಡೆಸಿದ್ದು, ಕಲ್ಲಿದ್ದಲು ಘಟಕಗಳಲ್ಲಿ ಲಭ್ಯವಿರುವ ಕಲ್ಲಿದ್ದಲು ಹಾಗೂ ವಿದ್ಯುತ್ ಬೇಡಿಕೆ ಬಗ್ಗೆ ಚರ್ಚಿಸಿದ್ದಾರೆ. ಈ ಸಂದರ್ಭದಲ್ಲಿ ವಿದ್ಯುತ್ ಹಾಗೂ ಕಲ್ಲಿದ್ದಲು ಸಚಿವಾಲಯದ ಉನ್ನತ ಅಧಿಕಾರಿಗಳು ಉಪಸ್ಥಿತರಿದ್ದರು.

ಕಲ್ಲಿದ್ದಲು ಪೂರೈಕೆ ಕೊರತೆಯಾದರೆ ವಿದ್ಯುತ್ ಸಮಸ್ಯೆ ಉಂಟಾಗಲಿದೆ ಎಂದು ಹಲವಾರು ರಾಜ್ಯಗಳು ಎಚ್ಚರಿಸಿದ ಬೆನ್ನಲ್ಲೇ ಈ ಸಭೆ ನಡೆಸಲಾಗಿದೆ.

ಅಕ್ಟೋಬರ್ ಎಂಟರಂದು ಈ ತಿಂಗಳಲ್ಲೇ ಅತಿ ಹೆಚ್ಚಿನ ವಿದ್ಯುತ್ ಬೇಡಿಕೆ ಇತ್ತು. ಅಂದು 3,900 ಎಂ.ಯು. ವಿದ್ಯುತ್ ಬೇಡಿಕೆ ಇತ್ತು. ಇದೂ ಸಹ ಕಲ್ಲಿದ್ದಲು ಕುರಿತು ಕಳವಳ ಹೆಚ್ಚಾಗಲು ಕಾರಣವಾಗಿದೆ.

**ಮಳೆಯಿಂದ ಸಾಗಣೆಗೆ ಸಮಸ್ಯೆ, ವಿದೇಶದಿಂದ ಆಮದು ಕುಂಠಿತ, ಸಮಸ್ಯೆ ಬಗೆಹರಿಸಲು ಸಚಿವರ ಜೊತೆ ಅಮಿತ್ ಷಾ ಚರ್ಚೆ**

ಶನಿವಾರದಂದು ಟಾಟಾ ಪವರ್‌ನ ಅಧೀನ ಸಂಸ್ಥೆಯಾದ ಡಿ.ಡಿ.ಎಲ್. ತನ್ನ ಗ್ರಾಹಕರಿಗೆ ಸಂದೇಶ ಕಳಿಸಿ, ಕಲ್ಲಿದ್ದಲು ಕೊರತೆಯ ಹಿನ್ನೆಲೆಯಲ್ಲಿ ಮಧ್ಯಾಹ್ನ 2ರಿಂದ 6ರ ನಡುವೆ ವಿದ್ಯುತ್ ಬಳಕೆ ಕಡಿಮೆ ಮಾಡುವಂತೆ ತಿಳಿಸಿತ್ತು.

ದೇಶದಲ್ಲಿ ದಾಖಲೆ ಪ್ರಮಾಣದ ಕಲ್ಲಿದ್ದಲು ಉತ್ಪಾದನೆಯಾಗಿದೆ. ಆದರೆ, ಮಳೆಯಿಂದಾಗಿ ಕಲ್ಲಿದ್ದನ್ನು ವಿದ್ಯುತ್ ಘಟಕಗಳಿಗೆ ಸಾಗಿಸುವಲ್ಲಿ ಸಮಸ್ಯೆ ಎದು ರಾಗಿದೆ. ಗುಜರಾತ್, ಪಂಜಾಬ್, ರಾಜಸ್ಥಾನ, ದೆಹಲಿ ಹಾಗೂ ತಮಿಳುನಾಡುಗಳಲ್ಲಿ ಕಲ್ಲಿದ್ದಲು ಕೊರತೆ ಎದುರಾಗಿದೆ.

ಇದರ ಜೊತೆಗೆ, ಕಲ್ಲಿದ್ದಲು ಘಟಕಗಳು ವಿದ್ಯುತ್ ಉತ್ಪಾದನೆಗಾಗಿ (3ನೇ ಪುಟಕ್ಕೆ)

# ಜಿಲ್ಲೆಯಲ್ಲಿ ಪ್ರತಿದಿನ ಕನಿಷ್ಠ 30 ರಿಂದ 40 ಸಾವಿರ ಲಸಿಕೆ ನೀಡಲು ಕ್ರಮ : ಡಿಸಿ

ದಾವಣಗೆರೆ, ಅ.11- ಮನೆ ಮನೆಗೂ ಹೋಗಿ ಜಾಗೃತಿ ಮೂಡಿಸಿದರೂ ಕೂಡ ಅನೇಕ ಜನರು ತಮ್ಮ ತಪ್ಪು ಕಲ್ಪನೆಯಿಂದ ಲಸಿಕೆ ಪಡೆಯಲು ಈಗಲೂ ಹಿಂಜರಿಯುತಿದ್ದಾರೆ. ವಾಸ್ತವ ಸತ್ಯವನ್ನು ತಿಳಿಸುವ ಸಲುವಾಗಿ ಮತ್ತು ಇಡೀ ನಗರವನ್ನು ಜಾಗೃತಿಗೊಳಿಸುವ ಸಲುವಾಗಿ ಅ.11 ರಿಂದ 13 ರವರಗೆ ಮೂರು ದಿನಗಳ ಕಾಲ ವಿಶೇಷ ಲಸಿಕಾ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹೇಳಿದರು.

ನಗರದ ಗಡಿಯಾರ ಕಂಬ ವೃತ್ತದಲ್ಲಿ ಜಿಲ್ಲಾಡಳಿತ, ಮಹಾನಗರಪಾಲಿಕೆ ಹಾಗೂ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಸೋಮವಾರ ಆಯೋಜಿಸಲಾಗಿದ್ದ ವಿಶೇಷ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜಿಲ್ಲೆಗೆ ಸುಮಾರು 12 ಲಕ್ಷ ಕೋವಿಡ್ ಲಸಿಕೆ ನೀಡುವ ಗುರಿ ನೀಡಲಾಗಿತ್ತು. ಈಗಾಗಲೇ ಸುಮಾರು 9.40 ಲಕ್ಷ ಲಸಿಕೆ ನೀಡಲಾಗಿದೆ. ಇನ್ನು ಸುಮಾರು 3 ಲಕ್ಷ ಜನರಿಗೆ ಮೊದಲ ಹಂತದ ಲಸಿಕೆ ಹಾಗೂ 1.66 ಲಕ್ಷ ಜನರಿಗೆ 2 ನೇ ಡೋಸ್ ಲಸಿಕೆ ನೀಡುವುದು ಬಾಕಿ ಇದೆ. (2ನೇ ಪುಟಕ್ಕೆ)

# ತಮಿಳುನಾಡಿಗೆ 39.84 ಟಿಎಂಸಿ ನೀರು ಬಿಡಲು ಆದೇಶ

ಚೆನ್ನೈ, ಅ. 11 – ತಮಿಳುನಾಡಿಗೆ ಬಾಕಿ ಇರುವ 39.84 ಟಿಎಂಸಿ ನೀರನ್ನು ಬಿಡುಗಡೆ ಮಾಡುವಂತೆ ಕರ್ನಾಟಕಕ್ಕೆ ಕಾವೇರಿ ನದಿ ನಿಯಂ ತ್ರಣ ಸಮಿತಿ ತಿಳಿಸಿದೆ ದೆಹಲಿಯಲ್ಲಿ ಸಭೆ ನಡೆಸಿ ರುವ ಸಮಿತಿ, ಅಕ್ಟೋಬರ್ 10ರವರೆಗೆ 25.84 ಟಿಎಂಸಿ ನೀರು ಬಿಡುವುದು ಬಾಕಿ ಇದೆ. ಅಕ್ಟೋ ಬರ್ 30ರವರೆಗಿನ 14 ಟಿಎಂಸಿ ನೀರು ಸೇರಿ ಒಟ್ಟು 39.84 ಟಿಎಂಸಿ ನೀರು ಬಿಡುವಂತೆ ತಿಳಿಸಿದೆ.

# ಅ.21ರಿಂದ 1 ರಿಂದ 5ನೇ ತರಗತಿ ಪ್ರಾರಂಭ

**ಸಚಿವ ನಾಗೇಶ್ ಇಂಗಿತ**

ಬೆಂಗಳೂರು, ಅ. 11 - ಒಂದರಿಂದ ಐದನೇ ತರಗತಿಗಳನ್ನು ಅಕ್ಟೋಬರ್ 21ರಿಂದ ಆರಂಭಿಸುವ ಇಂಗಿತವನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಇಂದಿಲ್ಲಿ ವ್ಯಕ್ತಪಡಿಸಿದರು.

ಶಾಲೆಗಳಿಗೆ ಪ್ರಸಕ್ತ ದಸರಾ ರಜೆ ಇದ್ದು 21 ರಿಂದ ಪುನರ್ ಆರಂಭವಾಗುವ ವೇಳೆಗೆ ಪ್ರಾಥಮಿಕ ತರಗತಿಗಳನ್ನು ಆರಂಭಿಸುವ ಸಿದ್ಧತೆ ಮಾಡಿಕೊಂಡಿದ್ದೇವೆ. ದಸರಾ ಮುಗಿಯುತ್ತಿದ್ದಂತೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಜ್ಞರ ಸಭೆ ನಡೆಸಲಿದ್ದಾರೆ.

ತಜ್ಞರ ಅಭಿಪ್ರಾಯ ಪಡೆದು ಮುಖ್ಯಮಂತ್ರಿ ಅವರೇ ಶಾಲೆ ಆರಂಭವಾಗುವ ದಿನ ಪ್ರಕಟಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ 6ರಿಂದ 12ನೇ ತರಗತಿವರೆಗೆ ಶಾಲೆಗಳು ಆರಂಭವಾಗಿವೆ, ಎಲ್ಲಿಯೂ ಕೊರೊನಾ ಭೀತಿ ಎದುರಾಗಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಒಂದರಿಂದ ಐದನೇ ತರಗತಿವರೆಗೆ (2ನೇ ಪುಟಕ್ಕೆ)

# ಹಳೇಬಾತಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಮರಗಳ ಕಳ್ಳ ಸಾಗಣೆ

## ಅರಣ್ಯ ಇಲಾಖೆಗೆ ಒಪ್ಪಿಸಿದ ಪಂಚಾಯಿತಿ ಅಧ್ಯಕ್ಷರು, ಸದಸ್ಯರು, ಗ್ರಾಮಸ್ಥರು



ದಾವಣಗೆರೆ, ಅ.11- ತಾಲ್ಲೂಕಿನ ಹಳೇಬಾತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೀಲಾನಹಳ್ಳಿ ಗ್ರಾಮದಲ್ಲಿನ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಬೆಳೆದಿರುವ ಬೆಲೆ ಬಾಳುವ ಹಳೇ ಮರಗಳನ್ನು ಅಕ್ರಮವಾಗಿ ಕಡಿದು ಕಳ್ಳ ಸಾಗಾಟ ಮಾಡುತ್ತಿದ್ದುದನ್ನು ಹಳೇಬಾತಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರು, ಗ್ರಾಮಸ್ಥರು ತಡೆದು, ಕಡಿದ ಮರಗಳ ತುಂಡುಗಳನ್ನು ಟ್ರ್ಯಾಕ್ಟರ್ ಸಹಿತ ಅರಣ್ಯ ಇಲಾಖೆಗೆ ಒಪ್ಪಿಸಿದ ಘಟನೆ ಇಂದು ನಡೆದಿದೆ.

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಯಾರೋ ದುಷ್ಕರ್ಮಿಗಳು ಸುಮಾರು 50ಕ್ಕೂ ಹೆಚ್ಚು ಮರಗಳನ್ನು ಕಳೆದ ಐದಾರು ದಿನಗಳಿಂದ ಕಡಿದು ಹಾಕಿದ್ದಾರೆ. 3-4 ದಿನಗಳಿಂದ ಟ್ರ್ಯಾಕ್ಟರ್‌ನಲ್ಲಿ ಸಾಗಿಸುತ್ತಿದ್ದ ಬಗ್ಗೆ ಗ್ರಾಮಸ್ಥರು ಹಳೇಬಾತಿ ಪಂಚಾಯಿತಿ ಗಮನಕ್ಕೆ ತಂದರು. ತಕ್ಷಣವೇ ಗ್ರಾಪಂ ಅಧ್ಯಕ್ಷರು, ಸದಸ್ಯರು, ಗ್ರಾಮಸ್ಥರು ಕಡಿದಿದ್ದ ಮರಗಳನ್ನು ತುಂಬಿಕೊಂಡು ಹೊರಟಿದ್ದ ಟ್ರ್ಯಾಕ್ಟರ್ ತಡೆದು ಅದನ್ನು ನಗರದ ವಲಯ ಅರಣ್ಯಾಧಿಕಾರಿಗಳ ಕಚೇರಿಗೆ ತಂದೊಪ್ಪಿಸಿದ್ದಾರೆ. ಹಳೇ ಬಾತಿ ಗ್ರಾಮದ (3ನೇ ಪುಟಕ್ಕೆ)

# ರಸ್ತೆ ಅಭಿವೃದ್ಧಿಗೆ ರವೀಂದ್ರನಾಥ್ ಚಾಲನೆ

ದಾವಣಗೆರೆ, ಅ.11- ಮಹಾನಗರ ಪಾಲಿಕೆಯ 23 ಮತ್ತು 32ನೇ ವಾರ್ಡುಗಳಲ್ಲಿ ಪಾಲಿಕೆ ವತಿಯಿಂದ ಕೈಗೆತ್ತಿಕೊಳ್ಳ ಲಾಗಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಸ್.ಎ. ರವೀಂದ್ರನಾಥ್, ಮೇಯರ್ ಎಸ್.ಟಿ.ವೀರೇಶ್ ಅವರುಗಳು ಇಂದು ಭೂಮಿ ಪೂಜೆ ನೆರವೇರಿಸಿದರು.

**23ನೇ ವಾರ್ಡ್ :** ಈ ವಾರ್ಡಿನಲ್ಲಿ ಶಾಸಕರ ವಿಶೇಷ ಅನುದಾನದಡಿಯಲ್ಲಿ ಹಾಗೂ ನಗರ ಪಾಲಿಕೆ ಸಾಮಾನ್ಯ ನಿಧಿಯಲ್ಲಿ ಎಸ್.ಎಸ್. ಬಡಾವಣೆ ಎ ಬ್ಲಾಕ್, ಕರ್ನಾಟಕ ಬ್ಯಾಂಕ್ ನಿಂದ ಎಸಿಬಿ ಕಚೇರಿವರೆಗೆ ಅಂದಾಜು 61.83 ಲಕ್ಷ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ಸಿಕ್ಕಿತು.



280 ಮೀಟರ್ ಕಾಂಕ್ರೀಟ್ ರಸ್ತೆ, 590 ಮೀಟರ್ ಡಾಂಬರ್ ರಸ್ತೆ, 250 ಮೀಟರ್ ಒಳ ಚರಂಡಿ ನಿರ್ಮಾಣ, 140 ಮೀಟರ್ ಮಳೆನೀರು ಚರಂಡಿ ನಿರ್ಮಾಣ ಕಾಮಗಾರಿ ನಡೆಯ ಲಿದ್ದು, 1ನೇ ದರ್ಜೆ ಗುತ್ತಿಗೆದಾರ ಸುರೇಶ್ ಬಾಬು ಎಂಬುವರಿಗೆ ಕಾಮಗಾರಿಗಳ ಗುತ್ತಿಗೆ ನೀಡಲಾಗಿದೆ.

23ನೇ ವಾರ್ಡಿನ ಪಾಲಿಕೆ ಸದಸ್ಯರಾದ ಶ್ರೀಮತಿ ರೇಖಾ ಸುರೇಶ್ ಗಂಡಗಾಳೆ ಮತ್ತು ಬಿಜೆಪಿ ಮುಖಂಡ ಸುರೇಶ್ ಗಂಡಗಾಳೆ ದಂಪತಿ ಅತಿಥಿ ಗಣ್ಯರನ್ನು ಸ್ವಾಗತಿಸಿದರು.

**32ನೇ ವಾರ್ಡ್ :** ಈ ವಾರ್ಡ್ ನಲ್ಲಿ ರಾಜ್ಯ ಸರ್ಕಾರದ ಎಸ್ ಎಫ್ ಸಿ ವಿಶೇಷ ಅನುದಾನದಲ್ಲಿ ಭಗೀರಥ ವೃತ್ತದಿಂದ ಶಕ್ತಿನಗರ 2ನೇ ಹಂತ, ಎಸಿ-ಎಸ್ಟಿ ವಿದ್ಯಾರ್ಥಿ ನಿಲಯದವರೆಗೆ 100 ಲಕ್ಷ ವೆಚ್ಚದಲ್ಲಿ ರಸ್ತೆ (3ನೇ ಪುಟಕ್ಕೆ)

**ಸೈಟ್ ಮಾರಾಟಕ್ಕಿದೆ**
ಬನಶಂಕರಿ ಬಡಾವಣೆಯಲ್ಲಿ 40x70 ಅಳತೆ ಸೈಟ್ ಮಾರಾಟಕ್ಕಿದೆ ಮತ್ತು 8500sqft ಅಳತೆಯ ಬ್ಯಾಂಕ್, ಸೂಪರ್ ಮಾರ್ಕೆಟ್, ಗೋಡೌನ್ ಮತ್ತಿತರೆ ಉಪಯೋಗಕ್ಕೆ ಅನುಕೂಲವಾದ ಜಾಗ ನೆಲ ಬಾಡಿಗೆಗೆ ದೊರೆಯುತ್ತದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
**91081 81864**

**ಸೈಟು, ಮನೆ ಖರೀದಿಗೆ ಬೇಕಾಗಿದೆ**
ಕೇವಲ (1/2 %) ಅರ್ಧ ಪರ್ಸೆಂಟ್ ಕಮೀಷನ್ ಗೆ ನಾವು ನಿಮ್ಮ ಸೈಟು, ಮನೆ ಮಾರಿಸಿಕೊಡುತ್ತೇವೆ.
ಕಿರಣ್ ಬೂಸ್ನೂರ್ : 98440-63409
ದಾವಣಗೆರೆ.

**ಮನೆಗಳು ಮಾರಾಟಕ್ಕಿವೆ**
40x60 North ಮೂರು ಬೆಡ್ ರೂಂ ಮನೆ, ಕುವೆಂಪು ಬಡಾವಣೆಯಲ್ಲಿ, 30x40 West 2 ಬೆಡ್ ರೂಂ ಹೊಸ ಮನೆ ಜಯನಗರದಲ್ಲಿ, 30x40 West 2 ಬೆಡ್ ರೂಂ ಶಾಮನೂರಿನಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
**99166 12110**

**ಕರ್ನಾಟಕ ಗೃಹಮಂಡಳಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
50x80 East, 40x60 East, 40x50 North, 30x40 North, 30x40 West, 30x50 East, 60 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
**99166 12110**

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲೇ ಇದ್ದು ಅಡುಗೆ ಮಾಡಲು ಮಹಿಳಾ ಸಿಬ್ಬಂದಿ ಬೇಕಾಗಿದ್ದಾರೆ. (ವಸತಿ ವ್ಯವಸ್ಥೆ ಇರುತ್ತದೆ) ಸಂಪರ್ಕಿಸಿ :
**86186 42929**
**08192-252208**

**ಬೇಕಾಗಿದ್ದಾರೆ**
ಅಕೌಂಟ್ಸ್ ಬರೆಯಲು Tally ತಿಳಿದಿರುವ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಆನಂದ ಹಾರ್ಡ್‌ವೇರ್ ಅಂಡ್ ಪೇಂಟ್ಸ್
ಮಂಡಿಪೇಟೆ, ದಾವಣಗೆರೆ.

**ಅಂಗಡಿ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ**
ಷಾ ಆಪ್ಟಿಕಲ್ಸ್
ಪಿ.ಜೆ ಬಡಾವಣೆ, ಶಾಮನೂರು ಶುಗರ್ಸ್ ಪಕ್ಕ, ದಾವಣಗೆರೆ.

**ಲೀಸ್ 12 ಲಕ್ಷ/ಬಾಡಿಗೆ 10,500**
ZP, TV ಸ್ಟೇಷನ್, ನ್ಯಾಯಾಲಯ, ಹೈಟೆಕ್ ಆಸ್ಪತ್ರೆ, ಸರ್.ಎಂ.ವಿ, ಲಲಿತ ಕಾಲೇಜ್, ಶಶಿ ಸೋಪ್, ಸುಬ್ರಮಣ್ಯ ದೇವಸ್ಥಾನದ ಹತ್ತಿರ ಸುಸಜ್ಜಿತ ನೀರು ಲಿಫ್ಟ್, ಕಾರ್ ಪಾರ್ಕಿಂಗ್‌ವುಳ್ಳ ಉತ್ತರ ದಿಕ್ಕಿನ 2 ಬೆಡ್ ರೂಂ ವಾಸ್ತು ಪ್ರಕಾರವಿದೆ.
**99865 38099, 99004 11110**

**2BHK ಮನೆಗಳು ಬಾಡಿಗೆಗೆ/ಲೀಜ್‌ಗೆ ಇವೆ**
ಕುಂದುವಾಡದ ಕೆರೆ, ಮಹಾಲಕ್ಷ್ಮಿ ಬಡಾವಣೆಯಲ್ಲಿ ಕಾವೇರಿ ಅಪಾರ್ಟ್ ಮೆಂಟ್ ಹಿಂಭಾಗದಲ್ಲಿ ಹೊಸದಾಗಿ ನಿರ್ಮಿಸಿರುವ ಎಲ್ಲಾ ಆಧುನಿಕ ಸೌಲಭ್ಯಗಳಿರುವ 2BHK ಮನೆಗಳು ರಿಯಾಯಿತಿ ದರದಲ್ಲಿ ಬಾಡಿಗೆಗೆ /ಲೀಜ್‌ಗೆ ಇವೆ.
**73380 43912, 63663 27368**

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ನುರಿತ ನರ್ಸ್‌ಗಳು, ಅನುಭವವುಳ್ಳ ಎ.ಎನ್.ಎಂ ಆದವರು ಬಯೋಡೇಟಾದೊಂದಿಗೆ ವಿಚಾರಿಸಿ. ಮತ್ತು ಆಯಾ ಬೇಕಾಗಿದ್ದಾರೆ.
ಸ್ಟೇಡಿಯಂ ಹತ್ತಿರ, ಪಿ.ಜೆ.ಬಡಾವಣೆ, ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
**99024-52312, 98450-35710**

**ಬೇಕಾಗಿದ್ದಾರೆ**
ಸ್ಟಾಫ್ ನರ್ಸ್‌ಗಳು ಬೇಕಾಗಿದ್ದಾರೆ ಮನೆ ಕೆಲಸಕ್ಕೆ ಬೇಕಾಗಿದ್ದಾರೆ ಆಸ್ಪತ್ರೆಗೆ ವಾಚ್ ಮೆನ್ ಬೇಕಾಗಿದ್ದಾರೆ. ಸಂಪರ್ಕಿಸಿ :
**98808 53626**

**ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 16 ಕಿ.ಮೀ ದೂರದಲ್ಲಿ 4 ಎಕರೆ 30 ಸೆಂಟ್ಸ್ ಅಪೋಸ್ ಮಾವಿನ ತೋಟ, 2ಎಕರೆ 30 ಸೆಂಟ್ಸ್ ತೆಂಗು ಇದರಲ್ಲಿ ಅಡಕೆ ಫಸಲಿಗೆ ಬಂದಿರುವ ತೋಟ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
**98809 33630**

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
**87490 24789, 94837 64859, 90080 67049**

**ಬೇಕಾಗಿದ್ದಾರೆ**
ಡಿಪಾರ್ಟ್‌ಮೆಂಟಲ್ ಸ್ಟೋರ್‌ನಲ್ಲಿ ಕೆಲಸ ಮಾಡಲು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. BIO DATA ಜೊತೆ ಸಂಪರ್ಕಿಸಿ: Sanjay
**94807 77622**

**ಬಾಡಿಗೆಗೆ ಇದೆ**
3BHK, 2nd floor ವಾಣಿಜ್ಯ ಅಥವಾ ವಾಸಕ್ಕೆ ಬಾಡಿಗೆಗೆ ಇದೆ. ಮಾವಿನ ತೋಪು ಆಸ್ಪತ್ರೆ ಹತ್ತಿರ, ಶಾಮನೂರು ಮೇನ್ ರೋಡ್.
(Only Vegetarians)
**95388 96927**

**ಗೀತಾ ಟ್ರಾವೆಲ್ಸ್ ದಾವಣಗೆರೆ**
ಮೂರು ದಿನಗಳ ಕಲರ್‌ಫುಲ್ ಹೈದರಾಬಾದ್ ಪ್ರವಾಸ, ಅಕ್ಟೋಬರ್ 27ರಂದು ಪ್ರವಾಸ ಸ್ಥಳಗಳು ಸಾಲರ್ ಜಂಗ್ ಮ್ಯೂಸಿಯಂ, ಎನ್‌ಟಿಆರ್ ಗಾರ್ಡನ್, ಲುಂಬಿನಿ ಪಾರ್ಕ್, ಲೇಸರ್ ಶೋ, ಚಾರ್ಮಿನಾರ್, ಬಿರ್ಲಾ ಮಂದಿರ, ಸ್ನೋ ವರ್ಲ್ಡ್, ರಾಮೋಜಿ ಫಿಲಂ ಸಿಟಿ.
ಎಸ್.ಎ. ರಾಜು
**9448 162499, 9945 534966**

**ಕೆಲಸಕ್ಕೆ ಬೇಕಾಗಿದ್ದಾರೆ**
S.R Construction ನಲ್ಲಿ ಆಫೀಸ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಹಿಂದಿ ಮಾತನಾಡಬಲ್ಲ ಕಂಪ್ಯೂಟರ್ ಆಪರೇಟರ್-1, Tally operator-1, ವಿಳಾಸ: S.A. ರವೀಂದ್ರನಾಥ ನಗರ, ಲೋಕಿಕೆರೆ ರೋಡ್, ದಾವಣಗೆರೆ.
**ಮೊ: 08192-295886 90352 20050**

**REQUIRED**
GENTS AND LADIES WARDEN, RECEPTION & TELECALLING
LOCATION : DAVANGERE
CONTACT :
**87628 67557, 78999 17593**

**WANTED**
1 Nursing Tutors
B.Sc Nursing passed candidates can apply
Call : **98440 65638**

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
**ಮೊ. 9538777582**
ಕೆಲಸ 100% ಗ್ಯಾರಂಟಿ.


**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. PUC or Any Degree.
ವಿಳಾಸ :
ಕಾವೇರಿ ಮೆಡಿಹೌಸ್ ಪ್ರೈ.ಲಿ.
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ-577 002.

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near Coffee day, Nutana Collage Road, Vidyanagara, 2nd main, Davangere
**77603 16576**
**90080 55813**

**ನೇರ ಪರೀಕ್ಷೆಗಳು**
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ. ಕೊನೆಯ ದಿ:23.10.2021
ಮಾನಸ ಎಜುಕೇಷನ್ ಟ್ರಸ್ಟ್(ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
**97402 58276**

**ಸುವರ್ಣ ಉದ್ಯೋಗಾವಕಾಶ**
ವಿದ್ಯಾರ್ಹತೆ : ಪಿಯುಸಿ or any ಡಿಗ್ರಿ. ವಯಸ್ಸು 18 ವರ್ಷ ಮೇಲ್ಪಟ್ಟು, ಯುವಕ-ಯುವತಿಯರು ಬೇಕಾಗಿದ್ದಾರೆ. ರೂ 9,000 - 12,000 ವರೆಗೆ. ನಿಮ್ಮ ವೃತ್ತಿಪರತೆ ನೋಡಿ ವೇತನ ಹೆಚ್ಚಿಸಲಾಗುವುದು ಹಾಗೂ ಯುವಕರಿಗೆ ದ್ವಿಚಕ್ರ ವಾಹನ ಇರುವವರಿಗೆ ಆದ್ಯತೆ, ಜೊತೆಗೆ ಡಿ.ಎಲ್., ಆರ್.ಸಿ. ಕಾರ್ಡ್ ಹೊಂದಿರಬೇಕು.
Ph : 8951455892, 99023 42040
ಅಡ್ರೆಸ್ : ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ಮೇನ್ ರೋಡ್, ಲಕ್ಷ್ಮಿ ಲೇಔಟ್, ದಾವಣಗೆರೆ.

**36ನೇ ವರ್ಷದ ನೆನಹು**




ಜನನ: 28-11-1928
ಕಾಲ: 12-10-1985

**ದಿ|| ಶ್ರೀ ಎಸ್. ಶಿವಮೂರ್ತಿ** ನಿವೃತ್ತ ಶಿಕ್ಷಕರು
(ಅಸಗೋಡು ದಿ. ಸಿರಗಪ್ಪಳ ವೀರಪ್ಪ ಮತ್ತು ದಿ. ಕರಿಬಸಮ್ಮನವರ ಮಗ)
ಸಜ್ಜನಿಕೆಯ ವ್ಯಕ್ತಿ, ಸದಾ ಹಸನ್ಮುಖಿ, ಸ್ನೇಹಮಯಿ, ಆದರ್ಶ ಶಿಕ್ಷಕ, ಸಾವಿರಾರು ವಿದ್ಯಾರ್ಥಿಗಳ ದಾರಿದೀಪ, ಅಜಾತಶತ್ರುವಾದ ನಿಮ್ಮ ನೆನಹಿನಲ್ಲಿ ಮತ್ತು ಮಾರ್ಗದರ್ಶನದಲ್ಲಿ ನಡೆಯುವ ಸಂಕಲ್ಪದಲ್ಲಿ
ಮಗಳು : **ಶ್ರೀಮತಿ ಎಸ್ ಲೀಲಾ,** ನಿವೃತ್ತ ಶಿಕ್ಷಕಿ,
ಮೊಮ್ಮಕ್ಕಳು : **ವಿನುತಾ** ಹಾಗೂ **ರವಿಶೇಖರ್,**
**ಮಮತಾ** ಹಾಗೂ **ನಟರಾಜ್** ಮತ್ತು **ಗಣೇಶ್** ಹಾಗೂ **ಸೌಮ್ಯ,**
ಮರಿಮೊಮ್ಮಕ್ಕಳು : **ಚಿ. ವೃಷಾಂಕ್, ಚಿ. ಚಂದ್ರಚೂಡ, ಚಿ. ಪ್ರಮಥ್** ಹಾಗೂ **ಚಿ. ಕೊಟ್ರೇಶ್**

# ಬಿಜೆಪಿ ತನ್ನ ವಿರುದ್ಧ ಧ್ವನಿ ಎತ್ತುತ್ತಿರುವ ರೈತರ ಉಸಿರನ್ನೇ ಅಡಗಿಸಿದೆ

## ರೈತರ ಹತ್ಯೆ ಖಂಡಿಸಿ ಹರಪನಹಳ್ಳಿಯಲ್ಲಿನ ಕಾಂಗ್ರೆಸ್ ಪ್ರತಿಭಟನೆಯಲ್ಲಿ ಆಕ್ರೋಶ



ಹರಪನಹಳ್ಳಿ, ಅ.11- ಉತ್ತರ ಪ್ರದೇಶದ ಲಖೀಂಪುರದಲ್ಲಿ ಹೋರಾಟ ನಿರತ ರೈತರ ಮೇಲೆ ಕಾರು ಚಲಾಯಿಸಿ ರೈತರನ್ನು ಹತ್ಯೆ ಮಾಡಿರುವ ಘಟನೆ ನಡೆದಿದ್ದು, ಇದನ್ನು ಖಂಡಿಸಿ ತಾಲ್ಲೂಕಿನ ವಿವಿಧ ಬ್ಲಾಕ್ ಕಾಂಗ್ರೆಸ್ ವತಿಯಿಂದ ಪಟ್ಟಣದಲ್ಲಿ ಇಂದು ಪ್ರತಿಭಟನಾ ಮೆರವಣಿಗೆ ನಡೆಸಿ ತಹಶೀಲ್ದಾರ್‌ಗೆ ಮನವಿ ಪತ್ರ ಸಲ್ಲಿಸಲಾಯಿತು.

ಪಟ್ಟಣದ ಕಾಂಗ್ರೆಸ್ ಕಚೇರಿಯಿಂದ ಹೊರಟ ಮೆರವಣಿಗೆ ಹೊಸಪೇಟೆ ರಸ್ತೆ ಮೂಲಕ ಮಿನಿವಿಧಾನ ಸೌಧಕ್ಕೆ ಆಗಮಿಸಿ ಬಹಿರಂಗ ಸಭೆ ನಡೆಸಲಾಯಿತು.

ಪ್ರಿಯಾಂಕ ಗಾಂಧಿ ಅವರನ್ನು ಅಕ್ರಮವಾಗಿ ಬಂಧಿಸಿದ್ದ ಪೊಲೀಸರನ್ನು ಅಮಾನತ್ತುಗೊಳಿಸಬೇಕು ಹಾಗೂ ರೈತ ವಿರೋಧಿ ಯೋಗಿ ಸರ್ಕಾರವನ್ನು ವಜಾಗೊಳಿಸಬೇಕು ಎಂದು ರೈತರು ಆಗ್ರಹಿಸಿದರು.

ಕೇಂದ್ರ ಸಚಿವರ ಪುತ್ರನ ಕಾರು ಹಾಯ್ದು 6 ಜನ ರೈತರು ಹತ್ಯೆಗೀಡಾಗಿದ್ದು, ರೈತ ವಿರೋಧಿ ಬಿಜೆಪಿ ಸರ್ಕಾರ ತನ್ನ ವಿರುದ್ಧ ಧ್ವನಿ ಎತ್ತುತ್ತಿರುವ ರೈತರ ಉಸಿರನ್ನೇ ಅಡಗಿಸಿದೆ. ಇದು ಪ್ರಜಾಪ್ರಭುತ್ವದ ವಿರೋಧಿ ನಿಲುವಾಗಿದೆ ಎಂದು ಅವರು ಟೀಕಿಸಿದರು.

ಹತ್ಯೆಯಾದ ಪ್ರತಿಯೊಂದು ರೈತ ಕುಟುಂಬಗಳಿಗೆ 1 ಕೋಟಿ ರೂ. ಪರಿಹಾರ ನೀಡಬೇಕು ಹಾಗೂ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಮಿಶ್ರಾ ರಾಜೀನಾಮೆಯನ್ನು ಕೂಡಲೇ ಪಡೆಯಬೇಕು ಎಂದು ಅವರು ಒತ್ತಾಯಿಸಿದರು.

ಬಳ್ಳಾರಿ ಜಿಲ್ಲಾ ಗ್ರಾಮೀಣ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶಿವಯೋಗಿ, ಕೆಪಿಸಿಸಿ ಮಹಿಳಾ ಪ್ರಧಾನ ಕಾರ್ಯದರ್ಶಿ ಎಂ.ಪಿ. ಲತಾ, ವಿವಿಧ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಬೇಲೂರು ಅಂಜಪ್ಪ, ಪ್ರೇಮಕುಮಾರ್, ಎಸ್. ಮಂಜುನಾಥ್, ಯುವ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ಟಿ. ಭರತ್, ಕೆಪಿಸಿಸಿ ಮಾಧ್ಯಮ ವಿಶ್ಲೇಷಕಿ ಎಂ.ಪಿ. ವೀಣಾ ಮಹಂತೇಶ್, ಮುಖಂಡರುಗಳಾದ ಎಂ.ಬಿ. ಯಶವಂತಗೌಡ, ಶಶಿಧರ ಪೂಜಾರ, ಎಚ್.ಬಿ. ಪರಶುರಾಮಪ್ಪ, ಡಾ. ಉಮೇಶ್ ಬಾಬು, ಕಾನಹಳ್ಳಿ ರುದ್ರಪ್ಪ, ಪ್ರಕಾಶ್ ಪಾಟೀಲ್, ಹುಲಿಕಟ್ಟಿ ಚಂದ್ರಪ್ಪ, ನೂರುದ್ದೀನ್, ತಾಲ್ಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಮತ್ತೂರು ಬಸವರಾಜ, ಬಿ. ನಜೀರ್ ಸಾಬ್, ಮತ್ತಿಹಳ್ಳಿ ಅಜ್ಜಣ್ಣ, ನೀಲಗುಂದ ಬಿ. ವಾಗೀಶ್, ಅಗ್ರಹಾರ ಅಶೋಕ್, ಉದಯಶಂಕರ್, ಒ. ಮಹಂತೇಶ್, ಶೃಂಗಾರ ತೋಟ ಬಸವರಾಜ್, ರಿಯಾಜ್, ಎನ್. ಮಜೀದ್, ತಿಮ್ಮಲಾಪುರದ ನಾಗರಾಜ್, ಗಾಯಿತ್ರಮ್ಮ, ಕವಿತ ಸುರೇಶ್, ಕಡಕೋಳ್, ನೂರುದ್ದೀನ್ ಇನ್ನಿತರರಿದ್ದರು.

# ಜಲರಾಶಿಯನ್ನು ಕಣ್ತುಂಬಿಕೊಂಡ ಸಿರಿಗೆರೆ ಶ್ರೀ





(1ನೇ ಪುಟದಿಂದ) ಮಾಜಿ ಸಚಿವ ಹೆಚ್. ಆಂಜನೇಯ ಮಾತನಾಡಿ, ರೈತರ ಬದುಕು ಹಸನಾಗಬೇಕೆಂಬುದು ತರಳಬಾಳು ಜಗದ್ಗುರುಗಳ ಕನಸು. ಬತ್ತಿಹೋಗಿ, ಮರೆಯಾಗಿ, ಒತ್ತುವರಿಯಾಗಿದ್ದ ಕೆರೆಗೆ ಮರುಜೀವ ತುಂಬಿದವರು. ಸರ್ಕಾರದ ಬಳಿ ಮಠಕ್ಕಾಗಿ ಏನನ್ನೂ ಕೇಳದೆ ಜನತೆಗಾಗಿ ನೀರು ಕೊಡಿ ಎಂದು ಕೇಳುವ ಏಕೈಕ ಪೂಜ್ಯರು. ರಾಜಕೀಯ ಮೇಲಾಟದಿಂದ ಸರ್ಕಾರ ಬದಲಾದರೂ ದೂರದೃಷ್ಟಿ ಮತ್ತು ಇಚ್ಛಾಶಕ್ತಿ ಹೊಂದಿರುವ ಶ್ರೀಗಳು ಸಕಾಲದಲ್ಲಿ ಈ ಕೆರೆಯನ್ನು ತುಂಬಿಸಲು ಶ್ರಮಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಎಂ. ಚಂದ್ರಪ್ಪ ಅವರು ಮಾತನಾಡಿ, ರಾಜಕಾರಣಿಗಳು ಮುಂದಿನ ಚುನಾವಣೆಯಲ್ಲಿ ಹೇಗೆ ಗೆಲ್ಲಬೇಕೆಂಬ ತಂತ್ರಗಳ ಬಗ್ಗೆ ಲೆಕ್ಕಾಚಾರ ಹಾಕುತ್ತಾರೆ. ಆದರೆ ಪೂಜ್ಯರು ಸದಾ ಮುಂದಿನ ಜನಾಂಗ ಹೇಗೆ ಬಾಳಬೇಕೆಂಬ ಕನಸು ಕಾಣುತ್ತಿರುತ್ತಾರೆ. ಅಧಿಕಾರ ಶಾಶ್ವತ ಅಲ್ಲ; ಜನಮೆಚ್ಚುವ ಕೆಲಸಗಳನ್ನು ಮಾಡಬೇಕೆಂಬುದು ನನ್ನ ಆಸೆ. ಈ ಯೋಜನೆಗೆ ಬೇಕಾದ ಪೂರ್ಣ ಹಣವನ್ನು ಸರಕಾರದಿಂದ ಒಂದೇ ಆದೇಶದಲ್ಲಿ ಮಂಜೂರು ಮಾಡಿಸಲಾಯಿತು. ಇಂತಹ ಉದಾಹರಣೆ ಮತ್ತೊಂದಿಲ್ಲ ಈ ಯೋಜನೆಗೆ ಬೇಕಾದ 220 ಮೆಗಾವ್ಯಾಟ್ ವಿದ್ಯುತ್ತನ್ನು ಜೋಗದಿಂದ ಮುಂದಿನ ಒಂದು ವರ್ಷದೊಳಗೆ ಸರಬರಾಜು ಆಗುವಂತೆ ಮಾಡುತ್ತೇನೆ. 7 ಗಂಟೆಗಳ ಕಾಲ ನಿರಂತರವಾಗಿ ಸರಬರಾಜು ಆಗುವಂತೆ ನೋಡಿಕೊಳ್ಳ ಲಾಗುವುದು ಎಂದು ಚಂದ್ರಪ್ಪ ಭರವಸೆ ನೀಡಿದರು.

ಜಗಳೂರಿನ ಶಾಸಕ ಎಸ್.ವಿ.ರಾಮಚಂದ್ರ ಮಾತನಾಡಿ, ಭರಮಸಾಗರದಲ್ಲಿ ಇಂದು ಜಲಸಾಗರ; ಜನಸಾಗರ. ಈ ಸಂಭ್ರಮವನ್ನು ನೋಡಲು ಕಣ್ಣುಗಳೆರಡು ಸಾಲದು ಎಂದು ಭಾವಾವೇಶಕ್ಕೊಳಗಾದರು. ಮುಂದಿನ ತಿಂಗಳೊಳಗೆ 1500 ಎಕರೆ ವಿಸ್ತೀರ್ಣದ ಜಗಳೂರು ತಾಲ್ಲೂಕಿನ ತುಪ್ಪದಹಳ್ಳಿ ಕೆರೆಗೆ ನೀರನ್ನು ಹರಿಸಲಾಗುತ್ತದೆ. 1200 ಕೋಟಿ ವೆಚ್ಚದ ಭದ್ರಾ ಮೇಲ್ದಂಡೆ ಯೋಜನೆಗೆ ಮುಖ್ಯಮಂತ್ರಿಗಳಿಂದ ಶೀಘ್ರದಲ್ಲೇ ಶಂಕುಸ್ಥಾಪನೆ ಮಾಡಿಸುತ್ತೇನೆ ಎಂದು ಹೇಳಿದರು.

ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಲ್ಲಿಕಾರ್ಜುನ ಗುಂಗೆ ಮಾತನಾಡಿ, ರಾಜ್ಯದಲ್ಲಿಯೇ ಅತಿ ಹೆಚ್ಚು ಉದ್ದವಾದ ಕೊಳವೆ ಮಾರ್ಗವಿದಾಗಿದೆ. ರೈಲ್ವೆ, ಅರಣ್ಯ, ಹೆದ್ದಾರಿ, ವಿದ್ಯುತ್ ಮುಂತಾದ ಹತ್ತಾರು ಇಲಾಖೆಯ ಆಕ್ಷೇಪಗಳನ್ನು ನಿವಾರಿಸಿ, ಸರ್ಕಾರದ ಸಹಕಾರ ಮತ್ತು ಹೆಜ್ಜೆ ಹೆಜ್ಜೆಗೂ ಪೂಜ್ಯರ ಮಾರ್ಗದರ್ಶನದಿಂದ ಯಶಸ್ವಿಗೊಳಿಸಲಾಗಿದೆ. ಈ ಯೋಜನೆಗೆ 110 ಕೆ ವಿ ವಿದ್ಯುತ್ ಅಗತ್ಯವಿದೆ. ಅದಕ್ಕೆ ಪ್ರತ್ಯೇಕ ಉಪಠಾಣೆಯನ್ನು ನಿರ್ಮಿಸಬೇಕು. ಈ ಉಪಠಾಣೆ ಪರಿಪೂರ್ಣಗೊಂಡರೆ ಆರು ಮೋಟಾರ್ ಗಳಿಂದ ನೀರೆತ್ತಬಹುದು. ಈಗ ಮೂರು ಮೋಟರ್‌ಗಳಿಂದ ಕೇವಲ ಶೇ. 35ರಷ್ಟು ಮಾತ್ರ ನೀರು ಎತ್ತುವಂತೆ ತಾಂತ್ರಿಕ ಜೋಡಣೆಯಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಮಲ್ಲಿಕಾರ್ಜುನ ಗುಂಗೆ, ಮುಖ್ಯಮಂತ್ರಿಗಳ ಕಾರ್ಯದರ್ಶಿ ಪ್ರಸನ್ನ ಕುಮಾರ್, ನೀರಾವರಿ ನಿಗಮದ ಕಾರ್ಯನಿರ್ವಹಣಾ ಇಂಜಿನಿಯರ್ ಗಳಾದ ಮಲ್ಲಪ್ಪ, ಮನೋಜ್‌ಕುಮಾರ್, ವಿಜಯಕುಮಾರ್ ಮುಂತಾದವರನ್ನು ಸನ್ಮಾನಿಸಲಾಯಿತು.

ಮಾಜಿ ಶಾಸಕ ಹೆಚ್.ಪಿ.ರಾಜೇಶ್, ಯುವ ಮುಖಂಡ ಅನಿತ್ ಕುಮಾರ್, ನಿಗಮದ ಅಶ್ವತ್ಥ್ ಶೆಟ್ಟಿ, ರಾಮಕುಮಾರ್, ಜಿಲ್ಲಾ ಪಂಚಾಯತ್ ಮಾಜಿ ಉಪಾಧ್ಯಕ್ಷ ತಿಪ್ಪೇಸ್ವಾಮಿ, ಸದಸ್ಯ ಡಿ.ವಿ. ಶರಣಪ್ಪ, ನಿವೃತ್ತ ಡಿ ವೈಎಸ್ ಪಿ ಜಗದೀಶ್ ಹಂಪನೂರು, ಆಡಳಿತಾಧಿಕಾರಿ ಎಸ್.ಬಿ. ರಂಗನಾಥ್ ಮುಂತಾದವರು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಸುಶ್ರಾವ್ಯ ಸಂಗೀತ ಶಾಲೆಯ ಯಶ ಮತ್ತು ಸಂಗಡಿಗರು ವಚನಗಳನ್ನು ಹಾಡಿದರು. ನೀರಾವಾರಿ ಹೋರಾಟ ಸಮಿತಿ ಅಧ್ಯಕ್ಷ ಶಶಿ ಪಾಟೀಲ್ ಸ್ವಾಗತಿಸಿದರು.

## ಮಡದಿಯರಿಗೆ ಬಂಗಾರ ಕೊಡಿಸಿ: ಸಲಹೆ

(1ನೇ ಪುಟದಿಂದ) ಹತ್ತು ದಿನ ಕಡ್ಡಾಯ ಕ್ವಾರಂಟೈನ್ ಆಗಬೇಕೆಂಬ ಬಿಗಿ ಕಾನೂನಿನಿಂದಾಗಿ ಪೂಜ್ಯರು ಅಲ್ಲಿಗೆ ತೆರಳಲಾಗಿರಲಿಲ್ಲ. ಆದರೆ ವರ್ಚ್ಯುವಲ್ ಮೂಲಕ ನಡೆದ ಸಭೆಯಲ್ಲಿ ಮಾತನಾಡಿದ ಶ್ರೀಗಳು ಭರಮಸಾಗರದ ಕೆರೆಗೆ ಉಕ್ಕಿ ಹರಿಯುತ್ತಿರುವ ತುಂಗಭದ್ರೆ ವಿಡಿಯೋವನ್ನು ತೋರಿಸಿದಾಗ ಅಲ್ಲಿ ನೆರೆದಿದ್ದ ವಿದ್ವಾಂಸರ ಮುಖದಲ್ಲಿ ಮಂದಹಾಸ ಮೂಡಿತು ಎಂದು ಶ್ರೀಗಳು ತಿಳಿಸಿದಾಗ ಜನತೆ ಅಪಾರ ಹರ್ಷೋದ್ಗಾರ ವ್ಯಕ್ತಪಡಿಸಿದರು.

ಈ ಯೋಜನೆಯಲ್ಲಿ ನೀರು ಮೇಲಕ್ಕೆ ಚಿಮ್ಮುವಂತೆ ಮಾಡಿರುವ ತಂತ್ರ ಬಹಳ ಕುತೂಹಲಕರವಾದುದು. ಭರಮಸಾಗರದ ಕೆರೆಗೆ ನೀರು ಬರುತ್ತಿದ್ದಂತೆಯೇ ಇಲ್ಲಿರುವ ಜಾಕ್ ವೆಲ್ ಮೂಲಕ ಏಕಕಾಲಕ್ಕೆ ಉಳಿದ 43 ಕೆರೆಗಳಿಗೂ ನೀರೆತ್ತುವಂತೆ ಈ ತಂತ್ರ ರೂಪಿಸಲಾಗಿದೆ ಎಂದು ಶ್ರೀಗಳು ತಿಳಿಸಿದಾಗ ಸಭೆ ಬೆಕ್ಕಸಬೆರಗಾಯಿತು.

### ಪೂಜ್ಯರ ಕರ್ತೃತ್ವ ಶಕ್ತಿ ಅಪಾರ

“ ಜಗತ್ತಿನ ಯಾವುದೇ ನೀರಾವರಿ ಯೋಜನೆ ಜಾರಿಗೆಯಾಗಬೇಕಾದರೆ ನೂರೆಂಟು ವಿಘ್ನಗಳಿರುತ್ತವೆ. ಆ ಎಲ್ಲಾ ವಿಘ್ನಗಳು ಪ್ರಸ್ತುತ ಈ ಯೋಜನೆಗೂ ಇದ್ದವು. ಆದರೆ, ಶ್ರೀಗಳ ಸಂಕಲ್ಪ ಶಕ್ತಿಯ ಮುಂದೆ ಆ ವಿಘ್ನಗಳು ಕರಗಿಹೋದದ್ದು ಪವಾಡ ಸದೃಶ ಎಂದರೆ ಅತಿಶಯೋಕ್ತಿಯಾಗಲಾರದು. ಇಂಜನಿಯರ್‌ಗಳಿಗೂ ತಿಳಿಯದ ಅನೇಕ ಸಂಗತಿಗಳು ಪೂಜ್ಯರಿಗೆ ತಿಳಿದಿದೆ. ಅವರ ಕರ್ತೃತ್ವ ಶಕ್ತಿ ಅಪಾರ

- **ಮಲ್ಲಿಕಾರ್ಜುನ ಗುಂಗೆ,**
ವ್ಯವಸ್ಥಾಪಕ ನಿರ್ದೇಶಕ,
ಕರ್ನಾಟಕ ನೀರಾವರಿ ನಿಗಮ

# ಹಬ್ಬಗಳಲ್ಲಿ ಮೆರವಣಿಗೆ ನಿಷೇಧ

(1ನೇ ಪುಟದಿಂದ) ಎಂದರು.

ಸರ್ಕಾರದ ನಿರ್ಬಂಧಗಳನ್ನು ಸಡಿಲಿಸಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವಿಲ್ಲ. ಆದರೆ ಅಗತ್ಯಬಿದ್ದರೆ ಇನ್ನಷ್ಟು ನಿರ್ಬಂಧ ವಿಧಿಸಲು ಅವಕಾಶವಿದೆ. ಹೀಗಾಗಿ ಇದೇ ದಿನಾಂಕ 15 ರವರೆಗಿನ ದಸರಾ ಹಾಗೂ ಇದೇ ದಿನಾಂಕ 20 ರಂದು ಈದ್‌ಮಿಲಾದ್ ಎರಡೂ ಹಬ್ಬಗಳ ಆಚರಣೆಯನ್ನು ಸರ್ಕಾರದ ಮಾರ್ಗಸೂಚಿಯಂತೆ ಆಚರಿಸಬೇಕು ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಮಾತನಾಡಿ, ಹಬ್ಬಗಳ ಆಚರಣೆ ನಮಗೂ ಖುಷಿ ತರುವ ವಿಷಯವೇ. ವಿಜೃಂಭಣೆಯ ಮೆರವಣಿಗೆಗಳನ್ನು ನಿರ್ಬಂಧಿಸುವುದರಿಂದ ನಮಗೂ ಖುಷಿ ದೊರೆಯುವುದಿಲ್ಲ. ಆದರೆ ಅನಿವಾರ್ಯವಾಗಿ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸಲೇಬೇಕಿದೆ. ಕಳೆದೆರಡು ವರ್ಷಗಳಿಂದ ಎಲ್ಲರೂ ಸಹಕರಿಸಿದ್ದಾರೆ. ಈ ಬಾರಿಯೂ ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು.

ಡಿವೈಎಸ್‌ಪಿ ಬಸವರಾಜ್ ಮಾತನಾಡಿ, ಇದೇ ದಿನಾಂಕ 20 ರಂದು ಆಚರಿಸಲಾಗುವ ಈದ್‌ಮಿಲಾದ್ ಹಬ್ಬದಲ್ಲಿ ಸಾಮೂಹಿಕ ಮೆರವಣಿಗೆ ನಿಷೇಧಿಸಲಾಗಿದೆ. ಮೊಹಲ್ಲಾಗಳಲ್ಲಿ ನಡೆಯುವ ಯಾವುದೇ ರೀತಿಯ ಹಗಲು ಮತ್ತು ರಾತ್ರಿಯ ಪ್ರವಚನ ಕಾರ್ಯಕ್ರಮ, ಸಾಂಸ್ಕೃತಿಕ ಕಾರ್ಯಕ್ರಮ, ಸಭೆ, ಸಮಾರಂಭಗಳಲ್ಲಿ 100 ಕ್ಕಿಂತ ಹೆಚ್ಚು ಜನ ಒಮ್ಮೆಲೇ ಸೇರುವಂತಿಲ್ಲ. ಸಾಮೂಹಿಕ ಅಂತರ ಕಡ್ಡಾಯವಾಗಿ ಪಾಲಿಸಬೇಕು. ಸಾರ್ವಜನಿಕ ಪ್ರದೇಶಗಳಲ್ಲಿ ಧ್ವನಿವರ್ಧಕಗಳು, ಡಿಜಿಟಲ್ ಸೌಂಡ್ (ಡಿಜೆ) ಬಳಕೆ ನಿಷೇಧಿಸಲಾಗಿದೆ. 60 ವರ್ಷಕ್ಕಿಂತ ಮೇಲ್ಪಟ್ಟ ನಾಗರಿಕರು ಹಾಗೂ 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಮನೆಯಲ್ಲಿಯೇ ಪ್ರಾರ್ಥನೆ ಮಾಡಬೇಕು. ಮಸೀದಿ ಪ್ರವೇಶಿಸುವ ಮೊದಲು ದೇಹದ ತಾಪಮಾನ ತಪಾಸಣೆ ಮಾಡುವ ವ್ಯವಸ್ಥೆ ಮಾಡಬೇಕಿದೆ ಎಂದು ಹೇಳಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಹಿಂದೂ ಹಾಗೂ ಮುಸ್ಲಿಂ ಸಮಾಜದ ಮುಖಂಡರು ಮಾತನಾಡಿ, ಸರ್ಕಾರದ ಮಾರ್ಗಸೂಚಿಯಂತೆ ಹಬ್ಬಗಳನ್ನು ಆಚರಿಸುವ ಮೂಲಕ ನಾವು ಸಹಕಾರ ನೀಡುವುದಾಗಿ ಹೇಳಿದರು.

ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ರಾಜೀವ್ ಉಪಸ್ಥಿತರಿದ್ದರು.

# ನಗರದ ಮಹಿಳಾ ನಿಲಯದಲ್ಲಿನ ಅನಾಥ ಮಹಿಳೆ ಸಾವು

ದಾವಣಗೆರೆ, ಅ. 11- ನಗರದಲ್ಲಿನ ರಾಜ್ಯ ಮಹಿಳಾ ನಿಲಯ ಸಂಸ್ಥೆಯಲ್ಲಿ ಅನಾಥ ನಿವಾಸಿಯಾಗಿದ್ದ 33 ವರ್ಷದ ಸಾವಿತ್ರಿ ಎಂಬ ಮಹಿಳೆ ಅನಾರೋಗ್ಯ ಕಾರಣದಿಂದ ನಿನ್ನೆ ಚಿಗಟೇರಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಳೆ.

ಸಾವಿತ್ರಿ ತಂದೆ ಬಸವಂತಪ್ಪ ಅವರು ಕಳೆದ 2015 ರ ಆಗಸ್ಟ್‌ನಲ್ಲಿ ವರ್ಗಾವಣೆ ಮೂಲಕ ಸಂಸ್ಥೆಯಲ್ಲಿ ದಾಖಲಾಗಿದ್ದರು. ನಿವಾಸಿಯು ಮಾನಸಿಕ ಅಸ್ವಸ್ಥೆಯಾಗಿದ್ದು, ಇತ್ತೀಚೆಗೆ ಆರೋಗ್ಯ ಸರಿಯಿಲ್ಲದ ಕಾರಣ ಚಿಕಿತ್ಸೆ ಕೊಡಿಸಲಾಗುತ್ತಿತ್ತು. ಅವರ ಮೃತದೇಹವನ್ನು ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿದೆ. ಸಾವಿತ್ರಿ ಅವರಿಗೆ ಸಂಬಂಧಿಸಿದವರು ರಾಜ್ಯ ಮಹಿಳಾ ನಿಲಯದ ಅಧೀಕ್ಷಕರ ಕಛೇರಿ, ಇಂಡಸ್ಟ್ರೀಯಲ್ ಏರಿಯಾ ಶ್ರೀರಾಮನಗರ ದಾವಣಗೆರೆ-577005, ಫೋ.ನಂ-9448940337 ಕ್ಕೆ ಸಂಪರ್ಕಿಸಬಹುದು ಎಂದು ರಾಜ್ಯ ಮಹಿಳಾ ನಿಲಯದ ಅಧೀಕ್ಷಕರು ತಿಳಿಸಿದ್ದಾರೆ.

# ಕ್ರಿಕೆಟ್ ಬೆಟ್ಟಿಂಗ್: ಬಂಧನ

ದಾವಣಗೆರೆ, ಅ.11- ನ್ಯಾಮತಿ ಪೊಲೀಸ್ ಠಾಣೆ ವ್ಯಾಪ್ತಿಯ ದೊಡ್ಡೆತ್ತಿನಹಳ್ಳಿ ಗ್ರಾಮದ ಸಾರ್ವಜನಿಕ ಸ್ಥಳದಲ್ಲಿ ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್ ಜೂಜಾಟದ ವೇಳೆ ನ್ಯಾಮತಿ ಠಾಣೆ ಪಿಎಸ್‌ಐ ರಮೇಶ್ ನೇತೃತ್ವದ ಪೊಲೀಸ್ ತಂಡ ದಾಳಿ ನಡೆಸಿ, ಓರ್ವನನ್ನು ಬಂಧಿಸಿ, 1,900 ನಗದು, 5 ಮೊಬೈಲ್ ಗಳ ವಶಪಡಿಸಿ ಕೊಂಡಿದೆ.

# 1 ರಿಂದ 5ನೇ ತರಗತಿ ಪ್ರಾರಂಭ

(1ನೇ ಪುಟದಿಂದ) ಆರಂಭಿಸಲು ನಾವು ಸಿದ್ಧತೆ ಮಾಡಿಕೊಂಡಿದ್ದೇವೆ. ಸಿಎಂ ಅವರು ಹಸಿರು ನಿಶಾನೆ ತೋರುತ್ತಿದ್ದಂತೆ ಪ್ರಾಥಮಿಕ ಶಿಕ್ಷಣದ ಭೌತಿಕ ಪಾಠ-ಪ್ರವಚನಗಳು ಆರಂಭವಾಗಲಿವೆ.

ಇದೇ 21ರಿಂದ ರಾಜ್ಯಾದ್ಯಂತ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಬಿಸಿ ಊಟವೂ ಆರಂಭವಾಗಲಿದೆ ಎಂದು ದಿನಾಂಕ ಪ್ರಕಟಿಸಿದರು.

ಕೋವಿಡ್‌ನಿಂದ ಕಳೆದ 2 ವರ್ಷಗಳಿಂದ ಬಿಸಿ ಊಟವನ್ನು ಸ್ಥಗಿತಗೊಳಿಸಲಾಗಿತ್ತು ಎಂದರು.

**ಬೇಕಾಗಿದ್ದಾರೆ**
ದೋಸೆ ಭಟ್ಟರು ಮತ್ತು ಸಪ್ಲೈಯರ್ ಬೇಕಾಗಿದ್ದಾರೆ. ಸಿದ್ಧಗಂಗಾ ಹೋಟೆಲ್, ದಾವಣಗೆರೆ.
ಸಂಪರ್ಕಿಸಿ
**70190 73163**

**ಬೇಕಾಗಿದ್ದಾರೆ**
ಪ್ರಚಲಿತ ವಿದ್ಯಮಾನ ವಿಶ್ಲೇಷಣೆ, ವಿಚಾರ, ವಿಷಯ ತಜ್ಞರ ಲೇಖನ ಗುಚ್ಛದೊಂದಿಗೆ ಅತ್ಯಾಕರ್ಷಕವಾಗಿ ಮಾರುಕಟ್ಟೆಗೆ ಬಂದಿರುವ ಸಂಪೂರ್ಣ ಕಲರ್ ಪುಟಗಳ
**'ಶೌರ್ಯ ಸಂದೇಶ್'**
ಕನ್ನಡ ವೀಕ್ಲಿ ಮ್ಯಾಗ್ ಜೀನ್ ಗೆ ರಾಜ್ಯದ ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಪತ್ರಿಕಾ ಏಜೆಂಟರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
**73491 22451**
**63629 24872**
**96866 82997**

# ಸಾವಿರ ಲಸಿಕೆ ನೀಡಲು ಕ್ರಮ: ಡಿಸಿ ಬೀಳಗಿ



**ಕೊರೊನಾ ಲಸಿಕೆ ಪಡೆದರೆ ಮಕ್ಕಳಾಗುವುದಿಲ್ಲ ಎಂಬುದು ತಪ್ಪು ಕಲ್ಪನೆ. ಲಸಿಕೆ ಪಡೆದರೆ ಕೋವಿಡ್ ಬಂದರೂ ಸಾವಿನ ಸಂಭಾವ್ಯತೆಯನ್ನು ಶೇ.95 ರಷ್ಟು ಯಶಸ್ವಿಯಾಗಿ ತಡೆಯಬಹುದು.**

**- ಮಹಾಂತೇಶ ಬೀಳಗಿ**

(1ನೇ ಪುಟದಿಂದ) ಇದರಲ್ಲಿ ಬಹುಪಾಲು ಹಳೆ ದಾವಣಗೆರೆ ಭಾಗದಲ್ಲಿನ ಹೆಚ್ಚಿನ ಜನರು ಲಸಿಕೆ ಪಡೆಯಲು ಹಿಂಜರಿಯುತ್ತಿದ್ದಾರೆ. ಆದ್ದರಿಂದ ವಿಶೇಷವಾಗಿ ಈ ಭಾಗದಲ್ಲಿ ಲಸಿಕಾ ಜಾಗೃತಿ ಹಮ್ಮಿಕೊಳ್ಳಲಾಗಿದೆ ಎಂದರು.

ಅ.13 ರವರೆಗೆ ಪ್ರತಿದಿನ ಕನಿಷ್ಠ 30 ರಿಂದ 40 ಸಾವಿರ ಲಸಿಕೆ ನೀಡುವ ಗುರಿ ಹೊಂದಲಾಗಿದೆ. ಈಗಾಗಲೇ ಲಸಿಕಾ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ನಗರದಲ್ಲಿ ಸುಮಾರು 60 ರಿಂದ 70 ಲಸಿಕಾ ಕೇಂದ್ರಗಳನ್ನು ತೆರೆಯಲಾಗಿದೆ ಸಾರ್ವಜನಿಕರು ತಮ್ಮ ಹತ್ತಿರದ ಲಸಿಕಾ ಕೇಂದ್ರಕ್ಕೆ ಭೇಟಿ ನೀಡಿ ಲಸಿಕೆ ಪಡೆಯಬೇಕು ಎಂದರು.

ಲಸಿಕೆ ಪಡೆದರೆ ಮಕ್ಕಳಾಗುವುದಿಲ್ಲ ಎಂಬುದು ತಪ್ಪು ಕಲ್ಪನೆ. ಲಸಿಕೆ ಪಡೆದರೆ ಕೋವಿಡ್ ಬಂದರೂ ಸಾವಿನ ಸಂಭಾವ್ಯತೆಯನ್ನು ಶೇ.95 ರಷ್ಟು ಯಶಸ್ವಿಯಾಗಿ ತಡೆಯಬಹುದು. ಈಗಾಗಲೇ ಮುಸಲ್ಮಾನ ಧರ್ಮಗುರುಗಳ ಸಭೆ ಮಾಡಿ ಮಸೀದಿಗಳಲ್ಲಿ ಆಜಾನ್ ಸಮಯದಲ್ಲಿ ಕೋವಿಡ್ ಲಸಿಕೆ ಪಡೆಯುವಂತೆ ಸೂಚಿಸಬೇಕು ಮತ್ತು ಭಿತ್ತಿ ಪತ್ರಗಳನ್ನು ಉರ್ದು ಭಾಷೆಯಲ್ಲಿ ಮುದ್ರಿಸಿ ಮಸೀದಿಗಳ ಗೋಡೆ ಮತ್ತು ಅಂಗಡಿಗಳ ಮುಂದೆ ಸಾರ್ವಜನಿಕರಿಗೆ ಕಾಣುವಂತೆ ಅಂಟಿಸಬೇಕು ಎಂದು ಮನವಿ ಮಾಡಲಾಗಿದೆ ಎಂದರು.

ಅಭಿಯಾನದಲ್ಲಿ ಜಿಲ್ಲಾಧಿಕಾರಿ ಮತ್ತು ಉಪವಿಭಾಗಾಧಿಕಾರಿ ಮಮತ ಹೊಸಗೌಡರ್ ಅವರು 'ಲಗಾಯೇಂಗೆ ಲಗಾಯೇಂಗೆ ಕೋವಿಡ್ ಲಸಿಕೆ ಲಗಾಯೇಂಗೆ' ಘೋಷಣೆ ಕೂಗುತ್ತಾ ಗಡಿಯಾರ ಕಂಬ, ಕಾಳಿಕಾದೇವಿ ರಸ್ತೆ, ಅಹಮದ್ ನಗರ, ಅರಳೀಮರ ವೃತ್ತ ಹಾಗೂ ಆಜಾದ್ ನಗರಗಳಲ್ಲಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಾ ಸಾಗಿದರು.

ಡಿವೈಎಸ್‌ಪಿ ಬಿ.ಎಸ್.ಬಸವರಾಜ್, ಅಲ್ಪಸಂಖ್ಯಾತರ ಕಲ್ಯಾಣ ಅಧಿಕಾರಿ ಅಮಿತ್ ಬಿದರಿ, ಆರ್‌ಸಿಹೆಚ್ ಅಧಿಕಾರಿ ಡಾ.ಮೀನಾಕ್ಷಿ ಹಾಗೂ ಸ್ಥಳೀಯ ಮುಖಂಡರು ಭಾಗವಹಿಸಿದ್ದರು.

## ನವದುರ್ಗೆಯರ 6ನೇ ರೂಪ
## ಕಾತ್ಯಾಯಿನಿ ದೇವಿಗೆ ನಮನ

ಆರನೇ ದುರ್ಗೆಗೆ ನಮೋ ನಮೋ
ಪರಮ ಕಾತ್ಯಾಯಿನಿಗೆ ನಮೋ ನಮೋ
ಪರಮಶಕ್ತಿಸ್ವರೂಪಿಣಿ ಜಗದಂಬೆ
ಸರಿಸಾಟಿಯಿಲ್ಲದವಳೆ ನಮೋ ನಮೋ

ಕಾತ್ಯಾಯನ ಋಷಿ ತಪಸಿಗೆ ಒಲಿದು
ಕಾತ್ಯಾಯಿನಿಯಾಗಿ ಬಂದವಳೆ
ಅತ್ಯದ್ಭುತ ಸಿಂಹವಾಹಿನಿ ತಾಯೆ
ದೈತ್ಯ ಸಂಕುಲಕೆ ಭಯಂಕರಳೆ

ಮಹಿಷಾಸುರಮರ್ಧಿನಿ ನೀನಮ್ಮ
ಮಹಾಮಾಯೆ ಮಹಿಮಾನ್ವಿತಳೆ
ಮೋಹಗೊಳಿಸಿ ಬಂಧಿಸಿ ಶಿಕ್ಷಿಸುವಳೆ
ಮಹೇಶ್ವರಿ ಭಕ್ತಿಗೆ ಒಲಿವವಳೆ

ನೀನನುಗ್ರಹಿಸೆ ಗ್ರಹಭಯವಿಲ್ಲ
ತ್ರಿನೇತ್ರೆ ತ್ರಿಗುಣಗಳ ಗೆದ್ದವಳೆ
ನಿತ್ಯ ನಿನ್ನಡಿಯಲಿ ಮನನಿಲಿಸಮ್ಮ
ನಿತ್ಯಾನಿತ್ಯಜ್ಞಾನ ಕೊಡುವವಳೆ

ಪರಿಪೂರ್ಣ ಜ್ಞಾನದಾಯಿನಿ ಜನನಿ
ಪರಿಪರಿ ರೋಗ ದುಃಖ ಶಮನಿ
ನಿರುಪಮೆ ಪೊರೆಯಮ್ಮ ಕಾತ್ಯಾಯಿನಿ
ಶರಣಾಗಿಹೆನು ಸಿರಿಹರಿ ಭಗಿನಿ

- **ಶ್ರೀ ಕೃಷ್ಣಾರ್ಪಣಮಸ್ತು, ರೂಪಶ್ರೀ ಶಶಿಕಾಂತ್**

# ಅಕ್ರಮವಾಗಿ ಕಸಾಯಿ ಖಾನೆಗೆ ಸಾಗಿಸುತ್ತಿದ್ದ 18 ಜಾನುವಾರುಗಳ ರಕ್ಷಣೆ

ದಾವಣಗೆರೆ, ಅ.11- ಅಕ್ರಮವಾಗಿ ಕಸಾಯಿ ಖಾನೆಗೆ ಲಾರಿಯಲ್ಲಿ ಸಾಗಿಸಲಾಗುತ್ತಿದ್ದ 18 ಜಾನುವಾರುಗಳನ್ನು ಇಲ್ಲಿನ ವಿದ್ಯಾನಗರ ಠಾಣೆ ಪೊಲೀಸರು ರಕ್ಷಿಸಿದ್ದು, ಮೂವರನ್ನು ಬಂಧಿಸಿದ್ದಾರೆ.

ರಾಣೇಬೆನ್ನೂರು ಕಂಚುಗಾರ ಲಾರಿ ಚಾಲಕ ಓಣಿಯ ವೀರೇಶ್, ಹಾಸನ ತಾಲ್ಲೂಕು ಕೋರವಂಗಲ ಟೌನ್‌ನ ಕ್ಲೀನರ್ ಅಣ್ಣಯ್ಯ, ಧಾರವಾಡದ ಹಳೇ ಹುಬ್ಬಳ್ಳಿಯ ದಾವಲ್ ಸಾಬ್ ಬೇಪಾಯಿ ಬಂಧಿತರು.

ಶಾಮನೂರು ಅಂಡರ್ ಬ್ರಿಡ್ಜ್ ಬಳಿ ರಾಷ್ಟ್ರೀಯ ಹೆದ್ದಾರಿ-48ರ ರಸ್ತೆಯಲ್ಲಿ ವಿದ್ಯಾನಗರ ಪೊಲೀಸ್ ಠಾಣೆಯ ಪಿಎಸ್‌ಐ ಪಿ. ಪ್ರಸಾದ್ ನೇತೃತ್ವದಲ್ಲಿ ದಾಳಿ ನಡೆಸಿ, ಪರಿಶೀಲಿಸಿದಾಗ ಐಷರ್ ವಾಹನದಲ್ಲಿ 8 ಎತ್ತುಗಳು ಮತ್ತು 10 ಎಮ್ಮೆಗಳನ್ನು ವಾಹನದಲ್ಲಿ ಸರಿಯಾಗಿ ನೀರು ಆಹಾರ ನೀಡದೇ, ಸರಿಯಾದ ಗಾಳಿ ಮತ್ತು ಬೆಳಕಿನ ವ್ಯವಸ್ಥೆ ಇಲ್ಲದೆ ಕ್ರೂರವಾಗಿ ಹಾಗೂ ಹಿಂಸಾತ್ಮಕವಾಗಿ ಒಂದರ ಪಕ್ಕ ಒಂದರಂತೆ ಒತ್ತೊತ್ತಾಗಿ ತುಂಬಿಕೊಂಡು ಹೋಗುವುದು ಕಂಡುಬಂದಿದೆ.

ಈ ಜಾನುವಾರುಗಳನ್ನು ರಾಣೇಬೆನ್ನೂರಿನಿಂದ ಆಂಧ್ರಪ್ರದೇಶದ ಅನಂತಪುರ ಕಸಾಯಿ ಖಾನೆಗೆ ಸಾಗಿಸಲಾಗುತ್ತಿತ್ತು ಎಂದು ಲಾರಿ ಚಾಲಕ ಬಾಯಿ ಬಿಟ್ಟಿದ್ದಾನೆ.

# ರಸ್ತೆ ಅಭಿವೃದ್ಧಿಗೆ ರವೀಂದ್ರನಾಥ್ ಚಾಲನೆ



(1ನೇ ಪುಟದಿಂದ) ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ.

32ನೇ ವಾರ್ಡಿನ ಪಾಲಿಕೆ ಸದಸ್ಯರೂ ಆಗಿರುವ ಸ್ಥಾಯಿ ಸಮಿತಿ ಅಧ್ಯಕ್ಷೆ ಶ್ರೀಮತಿ ಉಮಾ ಪ್ರಕಾಶ್ ಮತ್ತು ವಕೀಲ ಎ.ವೈ. ಪ್ರಕಾಶ್ ದಂಪತಿ ಅತಿಥಿ ಗಣ್ಯರನ್ನು ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಉಪ ಮೇಯರ್ ಹೆಚ್.ಆರ್. ಶಿಲ್ಪಾ, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಸ್ಥಾಯಿ ಸಮಿತಿ ಅಧ್ಯರುಗಳಾದ ಎಲ್.ಡಿ. ಗೋಣೆಪ್ಪ, ರೇಣುಕಾ ಶ್ರೀನಿವಾಸ್, ಗೀತಾ ದಿಳ್ಯೆಪ್ಪ, ಉಮಾ ಪ್ರಕಾಶ್, ಜಯಮ್ಮ ಗೋಪಿನಾಯಕ್, ಗೌರಮ್ಮ ಗಿರೀಶ್, ಮಾಜಿ ಉಪಮೇಯರ್ ಸೌಮ್ಯ ನರೇಂದ್ರಕುಮಾರ್, ಪಾಲಿಕೆ ನಾಮನಿರ್ದೇಶಿತ ಸದಸ್ಯ ಶಿವನಗೌಡ ಪಾಟೀಲ್, ಬಿಜೆಪಿ ಮುಖಂಡ ನರೇಂದ್ರಕುಮಾರ್ ಸೇರಿದಂತೆ ಇತರರು ಇದ್ದರು.

# ನ್ಯಾಯಾಂಗ ಇಲಾಖೆ : ಬೇಲೀಫ್, ಪ್ರೊಸೆಸ್ ಸಂಘಕ್ಕೆ ಆಯ್ಕೆ





ದಾವಣಗೆರೆ, ಅ.11 - ಜಿಲ್ಲಾ ನ್ಯಾಯಾಂಗ ಇಲಾಖೆಯಲ್ಲಿ ಬರುವ ಬೇಲೀಫ್ ಮತ್ತು ಪ್ರೊಸೆಸ್ ಸಂಘದ ಜಿಲ್ಲಾಧ್ಯಕ್ಷರಾಗಿ ಮನೋಹರ್ ಮತ್ತು ಉಪಾಧ್ಯಕ್ಷರಾಗಿ ಬಿ.ಎಸ್. ಬಸಪ್ಪಾಜಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕಾರ್ಯದರ್ಶಿ ಆರ್. ಗೋಪಾಲಕೃಷ್ಣ, ಸಂಘಟನಾ ಕಾರ್ಯದರ್ಶಿ ಎನ್.ಸಿ. ಹರ್ಷ ಹಾಗೂ ಖಜಾಂಚಿ ಓಂಕಾರಪ್ಪ, ನಿರ್ದೇಶಕರಾಗಿ ಸರಸ್ವತಿ, ಎಸ್. ಮಂಜುನಾಥ್, ತಿಪ್ಪೇಸ್ವಾಮಿ, ಕೆ. ಎಸ್. ದ್ರಾಕ್ಷಾಯಿಣಿ, ಬಿ.ಎಸ್. ಸುನೀಲ್ ಕುಮಾರ್, ಮಾರುತಿ ಕರಡಿ ಆಯ್ಕೆಗೊಂಡಿರುವುದಾಗಿ ದಾವಣಗೆರೆ ಬೇಲೀಫ್ ಮತ್ತು ಪ್ರೊಸೆಸ್ ಸಂಘದ ಕಾರ್ಯದರ್ಶಿ ಆರ್. ಗೋಪಾಲಕೃಷ್ಣ ತಿಳಿಸಿದ್ದಾರೆ.

# ಅಕ್ರಮ ಸಾಗಾಟ: 11 ಗೋವುಗಳ ರಕ್ಷಣೆ, ಇಬ್ಬರ ಸೆರೆ

ದಾವಣಗೆರೆ, ಅ.11- ಎರಡು ಮಿನಿ ಲಾರಿಗಳಲ್ಲಿ ಗೋವುಗಳನ್ನು ಅಕ್ರಮವಾಗಿ ಕಸಾಯಿ ಖಾನೆಗೆ ಸಾಗಿಸುತ್ತಿದ್ದ ವೇಳೆ ಸ್ವಯಂ ಸೇವಕನ ಸಹಕಾರದಲ್ಲಿ ದಾಳಿ ನಡೆಸಿರುವ ದಾವಣಗೆರೆ ಗ್ರಾಮಾಂತರ ಪೊಲೀಸರು 11 ಗೋವುಗಳನ್ನು ರಕ್ಷಿಸಿದ್ದು, ಇಬ್ಬರನ್ನು ಸೆರೆ ಹಿಡಿದಿದ್ದಾರೆ.

ಹಳೆ ಹುಬ್ಬಳ್ಳಿಯ ಮಿನಿ ಲಾರಿ ಚಾಲಕ ಅನ್ವರ್ ಶೇಕ್, ಮಿನಿ ಲಾರಿ ಮಾಲೀಕ ಮಹ್ಮದ್ ಅಯೂಬ್ ಬಂಧಿತರು.

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಸ್ವಯಂ ಸೇವಾ ಸಂಸ್ಥೆಯೊಂದರ ಕೆ.ಆರ್. ಮಂಜುನಾಥ ಮತ್ತು ದಾವಣಗೆರೆ ಗ್ರಾಮಾಂತರ ಪೊಲೀಸರು ಇಂದು ಮಧ್ಯಾಹ್ನ ದಾವಣಗೆರೆ-ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿ-48ರ ರಸ್ತೆಯ ಹೊನ್ನೂರು ಗೊಲ್ಲರಹಟ್ಟಿಯ ಸೇತುವೆ ಮೇಲೆ ವಾಹನಗಳ ಪರಿಶೀಲಿಸುತ್ತಿದ್ದಾಗ, ಒಂದರ ಹಿಂದೆ ಒಂದರಂತೆ ಬಂದ ಎರಡು ಮಿನಿ ಲಾರಿಗಳನ್ನು ನಿಲ್ಲಿಸಿ ಪರಿಶೀಲನೆ ನಡೆಸಿದಾಗ ಒಂದು ಲಾರಿಯಲ್ಲಿ 5 ಎತ್ತುಗಳು, ಒಂದು ಜರ್ಸಿ ಆಕಳು ಹಾಗೂ ಮತ್ತೊಂದು ಲಾರಿಯಲ್ಲಿ 5 ಎತ್ತುಗಳು ಇರುವುದು ಬೆಳಕಿಗೆ ಬಂದಿದೆ. ಪರಿಶೀಲನೆ ವೇಳೆ ಲಾರಿ ಚಾಲಕ ಓಡಿ ಹೋಗಿದ್ದಾನೆ.

# ಮಕ್ಕಳ ಮಾನಸಿಕ ಅಸ್ವಸ್ಥತೆ ಆರಂಭದಲ್ಲೇ ಗುರುತಿಸಿ

## ಶೇ.14ರಷ್ಟು ಮಕ್ಕಳಲ್ಲಿ ಮಾನಸಿಕ ಅಸ್ವಸ್ಥತೆ : ಜಿಲ್ಲಾ ನ್ಯಾಯಮೂರ್ತಿ ರಾಜೇಶ್ವರಿ ಎನ್. ಹೆಗಡೆ



ದಾವಣಗೆರೆ, ಅ. 11 - ದೇಶದಲ್ಲಿ ಶೇ.14ರಷ್ಟು ಮಕ್ಕಳು ಮಾನಸಿಕ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ ಎಂಬ ವರದಿಗಳಿವೆ. ಈ ಹಿನ್ನೆಲೆಯಲ್ಲಿ ಮಕ್ಕಳಲ್ಲಿನ ಮಾನಸಿಕ ಅಸ್ವಸ್ಥತೆಯನ್ನು ಆರಂಭಿಕ ಹಂತದಲ್ಲೇ ಗುರುತಿಸಿ ಚಿಕಿತ್ಸೆ ನೀಡಬೇಕಾದ ಅಗತ್ಯವಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಮೂರ್ತಿ ರಾಜೇಶ್ವರಿ ಎನ್. ಹೆಗಡೆ ಅಭಿಪ್ರಾಯ ಪಟ್ಟಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಕಾರ್ಯಕ್ರಮ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯಗಳ ಸಂಯುಕ್ತಾಶ್ರಯದಲ್ಲಿ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮಕ್ಕಳ ಮಾನಸಿಕ ಅಸ್ವಸ್ಥತೆ ಗುರುತಿಸಲು ಶಿಕ್ಷಕರಿಗೆ ತರಬೇತಿ ಬೇಕಿದೆ. ಮಕ್ಕಳಿಗೆ ಆರಂಭದಲ್ಲೇ ಚಿಕಿತ್ಸೆ ದೊರೆತರೆ ಆರೋಗ್ಯ ಸುಧಾರಣೆಯಾಗಿ, ಸಮಾಜಕ್ಕೆ ಮುಂದಿನ ದಿನಗಳಲ್ಲಿ ಸಮಸ್ಯೆಗಳು ತಪ್ಪುತ್ತವೆ ಎಂದರು.

ದೇಹಕ್ಕೆ ಕಾಯಿಲೆ ಬಂದಾಗ ವೈದ್ಯರ ಬಳಿ ತೊರಿಸಿಕೊಳ್ಳುವಂತೆಯೇ, ಮಾನಸಿಕ ಅಸ್ವಸ್ಥತೆ ಎದುರಾಗಲೂ ಚಿಕಿತ್ಸೆ ಪಡೆಯಲು ಹಿಂಜರಿಯ ಬಾರದು ಎಂದವರು ಕಿವಿಮಾತು ಹೇಳಿದರು.

ಎಎಸ್‌ಪಿ ಎಂ. ರಾಜೀವ್ ಮಾತನಾಡಿ, ಧ್ಯಾನ, ಸಂಗೀತ ಹಾಗೂ ನಡಿಗೆಗಳಂತಹ ಚಟುವಟಿಕೆಗಳಿಂದ ಮಾನಸಿಕ ಒತ್ತಡ ಕಡಿಮೆ ಮಾಡಿಕೊಳ್ಳಬಹುದು ಎಂದರು.

ಅಧ್ಯಕ್ಷತೆ ವಹಿಸಿದ್ದ ಜೆಜೆಎಂಸಿ ಪ್ರಾಂಶುಪಾಲ ಡಾ. ಎಸ್.ಬಿ. ಮುರುಗೇಶ್ ಮಾತನಾಡಿ, ಸಾಮಾಜಿಕ ಕಳಂಕದಿಂದ ಮಾನಸಿಕ ಅಸ್ವಸ್ಥತೆಗೆ ಚಿಕಿತ್ಸೆ ಪಡೆಯಲು ಹಿಂಜರಿಯುತ್ತಾರೆ. ಹೀಗಾಗಿ ಅಸ್ವಸ್ಥರ ಮನೆಯಲ್ಲೇ ಆಪ್ತಸಮಾಲೋಚನೆಗೆ ಜಿಲ್ಲಾಡಳಿತ ಕ್ರಮ ತೆಗೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಹಿರಿಯ ಸಿವಿಲ್ ನ್ಯಾಯಮೂರ್ತಿ ಹಾಗೂ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ, ಅಭಿಯೋಜನ ಇಲಾಖೆಯ ಸಹಾಯಕ ನಿರ್ದೇಶಕಿ ಕೆ.ಜಿ. ಕಲ್ಪನ ಮಾತನಾಡಿದರು. ಜೆ.ಜೆ.ಎಂ.ಸಿ.ಯ ಮನೋವೈದ್ಯಕೀಯ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ. ಕೆ. ನಾಗರಾಜ ರಾವ್ ಉಪನ್ಯಾಸ ನೀಡಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗರಾಜ್, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿ ಡಾ. ಪಿ.ಡಿ. ಮುರುಳೀಧರ ಉಪಸ್ಥಿತರಿದ್ದರು.

### ಹುಚ್ಚರನ್ನು ಗುಣಪಡಿಸಬಹುದು, 'ವಿದ್ಯಾವಂತರ'ದ್ದೇ ಕಷ್ಟ

ಮಾನಸಿಕ ರೋಗ ಹಾಗೂ ಹುಚ್ಚಿನ ನಡುವೆ ವ್ಯತ್ಯಾಸ ಇದೆ. 100 ಜನ ಮಾನಸಿಕ ರೋಗಿಗಳಲ್ಲಿ 10 ಜನರಿಗೆ ಮಾತ್ರ ಹುಚ್ಚಿರುತ್ತದೆ ಎಂದು ಜೆಜೆಎಂ ವೈದ್ಯಕೀಯ ಮಹಾವಿದ್ಯಾಲಯದ ಮನೋವೈದ್ಯಕೀಯ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ. ಕೆ. ನಾಗರಾಜ ರಾವ್ ತಿಳಿಸಿದ್ದಾರೆ.

ಹುಚ್ಚಿಗೆ ಬಹುತೇಕ ಭಾರೀ ಜೈವಿಕ ಅಂಶಗಳೇ ಕಾರಣ. ಬಹಳಷ್ಟು ಪ್ರಕರಣಗಳಲ್ಲಿ ಔಷಧ ಹಾಗೂ ಚಿಕಿತ್ಸೆ ಮೂಲಕ ಹುಚ್ಚು ಗುಣಪಡಿಸಬಹುದು ಎಂದವರು ಹೇಳಿದರು.

ಆದರೆ, ಕೆಲ ವಿದ್ಯಾವಂತರು ಎನಿಸಿಕೊಂಡವರು ಮನೋವೈದ್ಯರಿಗಿಂತ ತಾವೇ ಹೆಚ್ಚು ತಿಳಿದವರು ಎಂಬಂತೆ ವರ್ತಿಸುತ್ತಾರೆ. ತಮ್ಮ ಬಳಿ ಬರುವ ವಿದ್ಯಾವಂತ ಮಾನಸಿಕ ರೋಗಿಗಳಲ್ಲಿ ಬಹಳ ಜನ ನಮಗೆ ಹೀಗೆಯೇ ಚಿಕಿತ್ಸೆ ಕೊಡಿ, ಗುಳಿಗೆ ಬೇಡ ಎಂದೆಲ್ಲ ಪಟ್ಟು ಹಿಡಿಯುತ್ತಾರೆ. ಇವರಿಗೆ ಚಿಕಿತ್ಸೆ ನೀಡುವುದೇ ಕಷ್ಟ ಎಂದವರು ತಮ್ಮ ಅನುಭವ ಹಂಚಿಕೊಂಡರು.

### ಚಿಂತೆ ಇಲ್ಲದ ಮೆಂತ್ಯೆಯೇ ಇಲ್ಲ

ಭಗವಾನ್ ಬುದ್ಧ ಸಾವಿಲ್ಲದ ಮನೆಯ ಸಾಸಿವೆ ಸಿಗದು ಎಂದು ಹೇಳಿದ್ದ. ಅದೇ ರೀತಿ ಚಿಂತೆ ಇಲ್ಲದ ಮನೆಯ ಮೆಂತ್ಯೆಯೂ ಸಿಗದು ಎಂದು ಜೆಜೆಎಂ ವೈದ್ಯಕೀಯ ಮಹಾವಿದ್ಯಾಲಯದ ಮನೋವೈದ್ಯಕೀಯ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ. ಕೆ. ನಾಗರಾಜ ರಾವ್ ಹೇಳಿದ್ದಾರೆ.

ಮಾನಸಿಕ ರೋಗಗಳನ್ನು ಐದು ಸಾವಿರ ವರ್ಷಗಳ ಹಿಂದೆಯೇ ಗುರುತಿಸಲಾಗಿದೆ. ಆಗಿನಿಂದಲೂ ಎಲ್ಲರ ಮನೆಯಲ್ಲೂ ಚಿಂತೆ ಮಾಡುವವರಿದ್ದಾರೆ. ಹೀಗಾಗಿ ಚಿಂತೆ ಹಾಗೂ ಒತ್ತಡಗಳು ಮಾನಸಿಕ ಅಸ್ವಸ್ಥತೆಗೆ ಕಾರಣವಲ್ಲ. ಒತ್ತಡ ಹಾಗೂ ಚಿಂತೆಗಳು ಮೊದಲೇ ಇದ್ದ ಮಾನಸಿಕ ರೋಗದ ತೀವ್ರತೆ ಹೆಚ್ಚಿಸಬಹುದಷ್ಟೇ ಎಂದು ಹೇಳಿದರು.

ಜೈವಿಕ, ಮಾನಸಿಕ ಹಾಗೂ ಸಾಮಾಜಿಕ ಕಾರಣಗಳಿಂದ ಬರುವ 200ರಷ್ಟು ಬೇರೆ ಬೇರೆ ಮಾನಸಿಕ ರೋಗಗಳನ್ನು ಗುರುತಿಸಲಾಗಿದ್ದು, ಇವಕ್ಕೆ ಚಿಕಿತ್ಸೆಗಳೂ ಇವೆ. ಜನರು ಮಾನಸಿಕ ರೋಗಗಳಿಗೆ ಹಿಂಜರಿಯದೇ ಚಿಕಿತ್ಸೆ ಪಡೆಯ ಬೇಕು ಎಂದವರು ಕಿವಿಮಾತು ಹೇಳಿದರು.

# ಕನಿಷ್ಠ ಬೆಂಬಲ ಬೆಲೆ ಕಾಯ್ದೆ ಜಾರಿಗೆ ಆಗ್ರಹಿಸಿ ಪ್ರತಿಭಟನೆ




ದಾವಣಗೆರೆ, ಅ.11- ಕನಿಷ್ಠ ಬೆಂಬಲ ಬೆಲೆ ಕಾಯ್ದೆ ಜಾರಿಗೆ ತರುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ, ನಗರದ ಜಿಲ್ಲಾಡಳಿತ ಭವನದ ಮುಂದೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ನಂತರ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಮನವಿ ಸಲ್ಲಿಸಿದರು.

ಮೆಕ್ಕೆಜೋಳಕ್ಕೆ ಪ್ರತಿ ಕ್ವಿಂಟಾಲ್‌ಗೆ 3500 ರೂ. ನಿಗದಿ ಮಾಡಬೇಕು ಮತ್ತು ಖರೀದಿ ಕೇಂದ್ರ ತೆರೆಯುವಂತೆ ಪ್ರತಿಭಟನೆ ನೇತೃತ್ವ ವಹಿಸಿದ್ದ ಸಂಘದ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ಆಗ್ರಹಿಸಿದರು.

ಕೇಂದ್ರ ಸರ್ಕಾರ ಈಗಾಗಲೇ ಮೆಕ್ಕೆ ಜೋಳಕ್ಕೆ 1860 ರೂ. ಬೆಂಬಲ ಬೆಲೆ ನಿಗದಿ ಪಡಿಸಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ರಸಗೊಬ್ಬರ, ಔಷಧಿ, ಡೀಸೆಲ್, ಪೆಟ್ರೋಲ್ ಬೆಲೆ ಮತ್ತು ಕೃಷಿ ಕಾರ್ಮಿಕರ ಕೂಲಿ ಕೂಡ ಹೆಚ್ಚಾಗಿದೆ. ವ್ಯವಸಾಯದ ಖರ್ಚು ಜಾಸ್ತಿಯಾಗಿ ರೈತರು ನಷ್ಟ ಅನುಭವಿಸುವಂತಾಗಿದೆ ಎಂದರು.

ದೇಶಾದ್ಯಂತ ಕಳೆದ 10 ತಿಂಗಳಿಂದ ಕನಿಷ್ಠ ಬೆಂಬಲ ಬೆಲೆ ಕಾಯ್ದೆ ಜಾರಿಗೆ ಆಗ್ರಹಿಸಿ ಹೋರಾಟ ಮಾಡುತ್ತಿದ್ದರೂ, ಕೇಂದ್ರ ಸರ್ಕಾರ ಗಮನಹರಿಸುತ್ತಿಲ್ಲ. ಈಗ ಕೇಂದ್ರ ಸರ್ಕಾರ 1860 ರೂ. ಬೆಂಬಲ ಬೆಲೆ ನಿಗದಿಪಡಿಸಿದೆ. ಖರೀದಿದಾರರು 1200 ರಿಂದ 1400 ರೂ.ನಂತೆ ಖರೀದಿಸುತ್ತಿದ್ದಾರೆ. ಇದರಿಂದ ಪ್ರತಿ ಕ್ವಿಂಟಾಲ್ ಮೆಕ್ಕೆಜೋಳಕ್ಕೆ 460 ರಿಂದ 660 ರೂ.ಗಳವರೆಗೆ ನಷ್ಟವಾಗುತ್ತದೆ. 100 ಕ್ವಿಂಟಾಲ್ ಬೆಳೆದ ರೈತನಿಗೆ 66000 ಸಾವಿರ ರೂ. ನಷ್ಟವಾಗುತ್ತದೆ.ಇದನ್ನು ತಪ್ಪಿಸಲು ಕೇಂದ್ರ ಸರ್ಕಾರ ಕನಿಷ್ಠ ಬೆಂಬಲ ಬೆಲೆ ಕಾಯ್ದೆ ಜಾರಿಗೆ ತರಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘ ಮತ್ತು ಹಸಿರು ಸೇನೆ ಪದಾಧಿಕಾರಿಗಳಾದ ಗಂಗನಕಟ್ಟೆ ಷಣ್ಮುಖಪ್ಪ, ಹುಚ್ಚವ್ವನಹಳ್ಳಿ ಪ್ರಕಾಶ್, ಗುಮ್ಮನೂರು ಬಸವರಾಜ್, ಕೆಂಚಮ್ಮನಹಳ್ಳಿ ಹನುಮಂತಪ್ಪ, ತುಂಬಿಗೆರೆ ನಾಗರಾಜ್, ಶಿವಪುರ ಕೃಷ್ಣಮೂರ್ತಿ, ಆಲೂರು ಪರಶುರಾಮ್, ಕಾಡಜ್ಜಿ ಪ್ರಕಾಶ್, ನೀರ್ಥಡಿ ಭೀಮಣ್ಣ, ಕೋಲ್ಕುಂಟೆ ಹುಚ್ಚೆಂಗೆಪ್ಪ, ಕಿತ್ತೂರು ಹನುಮಂತಪ್ಪ, ಸಿದ್ದಪ್ಪ ನಾಯಕ ಮತ್ತಿತರರು ಪಾಲ್ಗೊಂಡಿದ್ದರು.

# ಹಳೇಬಾತಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಮರಗಳ ಕಳ್ಳ ಸಾಗಣೆ

(1ನೇ ಪುಟದಿಂದ) ಸರ್ಕಾರಿ ಖರಾಬು ಜಾಗದಲ್ಲಿ ಲೀಸ್ ಗೆ ನೀಡಲಾಗಿರುವ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಗ್ರಾಮಸ್ಥರು ಪರಿಸರ ಅಭಿವೃದ್ಧಿಗಾಗಿ ಬೆಳೆಸಿದ್ದ ಬೆಲೆ ಬಾಳುವ ಸಾವಿರಾರು ಮರಗಳ ಪೈಕಿ 50ಕ್ಕೂ ಹೆಚ್ಚು ಮರಗಳನ್ನು ಅಕ್ರಮವಾಗಿ ಕಡಿದು ಕಳ್ಳ ಸಾಗಾಣೆ ಮಾಡಲಾಗುತ್ತಿತ್ತು. ಈ ಸಂಬಂಧ ವಲಯ ಅರಣ್ಯಾಧಿಕಾರಿಗಳಿಗೆ ದೂರು ನೀಡಲಾಗಿದೆ ಎಂದು ಹಳೆಬಾತಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರು, ಗ್ರಾಮಸ್ಥರು ತಿಳಿಸಿದ್ದಾರೆ.

ತಕ್ಷಣವೇ ಮರ ಕಡಿಯುವುದಕ್ಕೆ ಕಡಿವಾಣ ಹಾಕಬೇಕು. ಹುಣಸೇಮರ, ನೀಲಗಿರಿ ಮರಗಳು, ದ್ವಾರುಣಸಿಕಾಯಿ ಮರ ಸೇರಿದಂತೆ ವಿವಿಧ ಜಾತಿಗಳ ದೊಡ್ಡ ದೊಡ್ಡ ಮರಗಳನ್ನು ಯಾರ ಅನುಮತಿಯನ್ನೂ ಪಡೆಯದೇ, ಅರಣ್ಯ ಇಲಾಖೆ ಗಮನಕ್ಕೂ ತಾರದೇ ಹನನ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಕಡಿದ ಮರಗಳನ್ನು ವಿಜಯ ನಗರ ಜಿಲ್ಲೆಯತ್ತ ಕೊಂಡೊಯ್ಯಲಾಗಿದ್ದು, ಕಡಿದಿದ್ದ ಮರಗಳನ್ನು ಇಂದು ಸಾಗಿಸುತ್ತಿದ್ದ ವೇಳೆ ನಾವೆಲ್ಲಾ ಗ್ರಾಮಸ್ಥರು ತಡೆ ಹಿಡಿದಿದ್ದೇವೆ. ಮೂರ್ನಾಲ್ಕು ದಿನಗಳಿಂದಲೂ ಇದೇ ರೀತಿ ಮರಗಳನ್ನು ಟ್ರ್ಯಾಕ್ಟರ್‌ನಲ್ಲಿ ತುಂಬಿಕೊಂಡು ಹೋಗಿದ್ದು, ಅವುಗಳನ್ನು ಎಲ್ಲಿಗೆ ಒಯ್ದಿದ್ದಾರೋ ಅಲ್ಲಿಂದ ಜಪ್ತು ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

### ಷಷ್ಠಿ ವೈಭವ

ಕಾತ್ಯಾಯಿನಿ ದೇವಿ ರಕ್ಷಿಸೆಮ್ಮ
ಅತಿ ಶೀಘ್ರ ವರ ನೀಡುವ ಅಮ್ಮ
ಅತ್ಯಂತ ಭಕ್ತಿಯಲಿ ಪೂಜಿಪೆನಮ್ಮ
ಮಾತೇ ನೀ ಧೈರ್ಯವ ನೀಡಿ ಸಲಹೆಮ್ಮಾ

ಹಸಿರು ವಸ್ತ್ರವ ತೊಡಿಸುವೆ
ಹಸಿರು ಎಲ್ಲೆಲ್ಲೂ ಹರಡು ತಾಯೇ
ಬೀಸಿ ಬರುವ ದುರ್ಗಮವ ಕಳೆ ತಾಯೇ
ಚಿಮ್ಮಿಸು ಸುಖ ಶಾಂತಿ ನೆಮ್ಮದಿ ತಾಯೇ

ಷಷ್ಠಿ ನವರಾತ್ರಿಯಲಿ ಸಿಂಹವನೇರಿ ಬರುವೆ
ಕಷ್ಟಗಳ ನೀ ಬೇಗನೆ ಕಳೆವೆ
ದುಷ್ಟ ಮಹಿಷಾಸುರನ ವಧಿಸಿದೆ
ಶಿಷ್ಟರ ರಕ್ಷಿಸು ಎಂದು ನೀ ಬಿಡದೆ

ಕಾತ್ಯಾಯನ ಋಷಿ ಪುತ್ರಿ ನೀ
ಅಂತರಾಳದಿಂದ ಸ್ತುತಿಸುವೆ ನಿನ್ನಾ
ಅಂತರಂಗದ ಕೂಗು ಕೇಳಿಸದೇ ನಿನಗೆ
ಅಖಂಡ ದೀಪ ಬೆಳಗಿ ಬೇಡುವೆ ಮಾತೆ

**- ಕೋಮಲ ವಿ. ಕುಮಾರ್**

# ಭ್ರಷ್ಟಾಚಾರ ತಡೆ, ಖರೀದಿ ಕೇಂದ್ರ ತೆರೆಯಲು ಆಗ್ರಹ



ಹರಿಹರದಲ್ಲಿ ರೈತರ ಬೃಹತ್ ಪ್ರತಿಭಟನೆ

ಹರಿಹರ, ಅ.11- ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ವತಿಯಿಂದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವಂತೆ ಮತ್ತು ಮೆಕ್ಕೆಜೋಳ, ಭತ್ತದ ಖರೀದಿ ಕೇಂದ್ರಗಳನ್ನು ತೆರೆಯುವಂತೆ ಒತ್ತಾಯಿಸಿ ಇಂದಿಲ್ಲಿ ಪ್ರತಿಭಟನೆ ನಡೆಸಿದ ನಂತರ, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪನವರಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆ ನಗರದ ಫಕ್ಕೀರಸ್ವಾಮಿ ಮಠದ ಆವರಣದಿಂದ ಪ್ರಾರಂಭಗೊಂಡು, ರಾಣಿ ಚೆನ್ನಮ್ಮ ವೃತ್ತ, ಮುಖ್ಯ ರಸ್ತೆ ಮುಖಾಂತರ ಸಂಚರಿಸಿ, ಗಾಂಧಿ ವೃತ್ತದಲ್ಲಿ ಮಾನವ ಸರಪಳಿ ರಚಿಸಿ, ಸರ್ಕಾರದ ವಿರುದ್ಧ ಘೋಷಣೆ ಹಾಕಿದರು.

ಈ ವೇಳೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯದರ್ಶಿ ತೇಜಸ್ವಿ ಪಟೇಲ್ ಮಾತನಾಡಿ, ತಾಲ್ಲೂಕಿನ ಇಲಾಖೆಗಳ ಅಧಿಕಾರಿಗಳು ಜನರಿಗೆ ಸೇವೆಯನ್ನು ನೀಡಬೇಕು. ಅದನ್ನು ಬಿಟ್ಟು ಲಂಚದ ರೂಪದಲ್ಲಿ ದರವನ್ನು ನಿಗದಿಪಡಿಸಿಕೊಂಡು, ಸೇವೆಯನ್ನು ಒದಗಿಸುವುದಕ್ಕೆ ಮುಂದಾಗಿದ್ದಾರೆ. ಭ್ರಷ್ಟಾಚಾರ ಮಿತಿ ಮೀರಿ ಆಡಳಿತ ಸುಧಾರಣೆ ಕಣ್ಮರೆಯಾಗಿದೆ. ಲಂಚ ನೀಡದೆ ಕೆಲಸಗಳಾಗುವುದಿಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ರೈತರ ಸ್ಥಿತಿ ಹೇಳತೀರದಾಗಿದ್ದು, ಪಾರದರ್ಶಕ ಆಡಳಿತ ನೀಡುವಂತಾಗಬೇಕಿದೆ ಎಂದರು.

ಭಾರತ ವಿದೇಶದಿಂದ ಆಹಾರ ಪದಾರ್ಥಗಳನ್ನು ಖರೀದಿಸುವ ಸಂದರ್ಭ ಇದುವರೆಗೂ ಉದ್ಭವ ವಾಗಿಲ್ಲ. ಬೆಳೆಗಳು ಇದ್ದಾಗ ಖರೀದಿ ಕೇಂದ್ರವನ್ನು ತೆರೆದು, ರೈತರ ಕುಟುಂಬಕ್ಕೆ ಆಸರೆಯಾಗಬೇಕು. ಭತ್ತದ ಬೆಳೆಗೆ 3,000 ಸಾವಿರ ರೂ. ದರ ನಿಗದಿ ಮಾಡಬೇಕು ಎಂದರು.

ರೈತ ಮುಖಂಡ ಜಿ. ಪ್ರಭುಗೌಡ ಕಡರನಾಯಕನಹಳ್ಳಿ, ಹಾಳೂರು ನಾಗರಾಜ್ ಮಾತನಾಡಿದರು.

ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಮಾತನಾಡಿ, ರೈತರ ಸಮಸ್ಯೆಗಳನ್ನು ಪರಿಹರಿಸಲು ವಿವಿಧ ಇಲಾಖೆಯ ಅಧಿಕಾರಿಗಳ ಸಭೆಯನ್ನು ಇದೇ ದಿನಾಂಕ 26 ರಂದು ಬೆಳಗ್ಗೆ 11 ಗಂಟೆಗೆ ಗುರುಭವನದಲ್ಲಿ ಏರ್ಪಡಿಸಿದ್ದು, ತಾಲ್ಲೂಕಿನ ರೈತರು ಆ ಸಭೆಯಲ್ಲಿ ಭಾಗವಹಿಸಿ ತಮಗೆ ಇರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ರೈತ ಮುಖಂಡ ಹೆಚ್.ಬಿ. ಕೊಟ್ರೇಶ್ ಭಾನುವಳ್ಳಿ, ಪ್ರಕಾಶ್ ಭಾನುವಳ್ಳಿ, ಶಂಭುಲಿಂಗಪ್ಪ ಬನ್ನಿಕೋಡು, ರುದ್ರಮುನಿ ಹನಗವಾಡಿ, ಮಹೇಶಪ್ಪ ದೊಗ್ಗಳ್ಳಿ, ಚಂದ್ರಪ್ಪ ಅಮರಾವತಿ, ಸಿರಿಗೆರೆ ಪಾಲಾಕ್ಷಪ್ಪ, ಬಸಪ್ಪ ಗರಡಿಮನಿ ಗುತ್ತೂರು, ಬಸವರಾಜ್ ಹಲಸಬಾಳು, ಬೀರೇಶ್ ಹಾಲಿವಾಣ, ಪಿ. ಸುರೇಶ್, ಕರಿಯಪ್ಪ ಹಾಲಿವಾಣ, ಡಿ.ಜಿ. ಬಸವರಾಜ್, ಪ್ರಕಾಶ್ ಕೊಂಡಜ್ಜಿ, ಜೀವಯ್ಯ ಕೊಂಡಜ್ಜಿ, ಕುಂಬಳೂರು ಅಂಜಿನಪ್ಪ, ವೈ. ಮೋಹನ್, ವಿಜಯಕುಮಾರ್, ರೇವಣಸಿದ್ದಪ್ಪ ಹನಗವಾಡಿ, ಪಿ. ಮಂಜಪ್ಪ, ಬಸಪ್ಪ, ಬಂಗಾರಿ ವಸಂತಪ್ಪ ಮತ್ತು ಕೃಷಿ ಇಲಾಖೆಯ ನಾರದಪ್ಪ, ತೋಟಗಾರಿಕೆ ಇಲಾಖೆಯ ಕವಿತಾ ಗ್ರೇಡ್ 2 ತಹಶೀಲ್ದಾರ್ ಶಶಿಧರ್ ಇತರರು ಹಾಜರಿದ್ದರು. ಸಿಪಿಐ ಸತೀಶ್ ಕುಮಾರ್ ಮತ್ತು ಪೊಲೀಸ್ ಸಿಬ್ಬಂದಿಗಳಾದ ಮಂಜುನಾಥ್, ಸತೀಶ್, ಲಿಂಗರಾಜ್, ಕವಿತಾ, ನಾಗರಾಜ್ ರೈತರಿಗೆ ಭದ್ರತೆ ಕಲ್ಪಿಸಿದರು.

**ರೈತರ ಸಮಸ್ಯೆಗಳನ್ನು ಪರಿಹರಿಸಲು ಅ. 26 ರ ಬೆಳಿಗ್ಗೆ ಗುರುಭವನದಲ್ಲಿ ಮಹತ್ವದ ಸಭೆ ಏರ್ಪಡಿಸಿದೆ.**

**- ಕೆ.ಬಿ. ರಾಮಚಂದ್ರಪ್ಪ , ತಹಶೀಲ್ದಾರ್**

**ಸರ್ಕಾರಿ ಸೇವೆಗಳು ಸಾರ್ವಜನಿಕರಿಗೆ ಉಚಿತವಾಗಿ ದೊರೆಯಬೇಕಿದೆ. ಆದರೆ, ತಾಲ್ಲೂಕಿನಲ್ಲಿ ಭ್ರಷ್ಟಾಚಾರ ಮಿತಿ ಮೀರಿ ಆಡಳಿತ ಕಣ್ಮುಚ್ಚಿ ಕುಳಿತುಕೊಂಡಿದೆ.**

**- ತೇಜಸ್ವಿ ಪಟೇಲ್, ರೈತ ಮುಖಂಡ**

# ಕಲ್ಲಿದ್ದಲು ಕೊರತೆ

(1ನೇ ಪುಟದಿಂದ) ಕಲ್ಲಿದ್ದಲು ಆಮದು ಮಾಡಿಕೊಳ್ಳುತ್ತಿದ್ದವು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಲ್ಲಿದ್ದಲು ಬೇಡಿಕೆ ಹೆಚ್ಚಾಗಿರುವುದರಿಂದ ಆಮದು ಕಡಿಮೆ ಮಾಡಲಾಗಿದೆ. ಇಲ್ಲವೇ ಸಂಪೂರ್ಣ ನಿಲ್ಲಿಸಲಾಗಿದೆ. ಇದೂ ಸಹ ರಾಜ್ಯಗಳಲ್ಲಿ ಕಲ್ಲಿದ್ದಲು ಸಮಸ್ಯೆಗೆ ಕಾರಣವಾಗಿದೆ.

ಕಳೆದ ಅಕ್ಟೋಬರ್ 7ರಂದು ಕೋಲ್ ಇಂಡಿಯಾದಿಂದ 1501 ಎಂ.ಟಿ. ಕಲ್ಲಿದ್ದಲು ರವಾನಿಸಲಾಗಿತ್ತು. ಇದು ಬೇಡಿಕೆ ಹಾಗೂ ಪೂರೈಕೆ ನಡುವೆ ಇದ್ದ ಅಂತರವನ್ನು ತಗ್ಗಿಸಿದೆ ಎಂದು ಕೇಂದ್ರ ಇಂಧನ ಸಚಿವಾಲಯ ತಿಳಿಸಿದೆ.

ಮುಂದಿನ 3 ದಿನಗಳಲ್ಲಿ ಕಲ್ಲಿದ್ದಲು ಪೂರೈಕೆಯನ್ನು 1.6 ಎಂ.ಟಿ.ಗೆ ಹೆಚ್ಚಿಸಲಾಗುವುದು. ನಂತರ ಪ್ರತಿದಿನ 1.7 ಎಂ.ಟಿ. ಕಲ್ಲಿದ್ದಲು ಪೂರೈಕೆಗೆ ಪ್ರಯತ್ನ ನಡೆಸಲಾಗುವುದು. ಇದು ವಿದ್ಯುತ್ ಘಟಕಗಳು ಹೆಚ್ಚಿನ ಕಲ್ಲಿದ್ದಲು ದಾಸ್ತಾನು ಹೊಂದಲು ನೆರವಾಗಲಿದೆ ಎಂದು ಸಚಿವಾಲಯ ತಿಳಿಸಿದೆ.

ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿಯ ಅಕ್ಟೋಬರ್ 7ರ ದಾಖಲೆಗಳ ಪ್ರಕಾರ, 16,880 ಎಂ.ಡಬ್ಲ್ಯೂ. ವಿದ್ಯುತ್ ಉತ್ಪಾದಿಸುವ 16 ಘಟಕಗಳಲ್ಲಿ ಒಂದು ದಿನಕ್ಕಾಗುವಷ್ಟೂ ಕಲ್ಲಿದ್ದಲು ಇಲ್ಲ.

37,345 ಎಂ.ಡಬ್ಲ್ಯೂ. ಸಾಮರ್ಥ್ಯದ 30 ಘಟಕಗಳಲ್ಲಿ ಒಂದು ದಿನಕ್ಕಾಗುವಷ್ಟು ಮಾತ್ರ ಕಲ್ಲಿದ್ದಲು ಲಭ್ಯವಿದೆ. 23,450 ಎಂ.ಡಬ್ಲ್ಯೂ. ಸಾಮರ್ಥ್ಯದ 18 ಘಟಕಗಳಲ್ಲಿ ಎರಡು ದಿನಗಳಿಗಾಗುವಷ್ಟು ಮಾತ್ರ ಕಲ್ಲಿದ್ದಲು ಇದೆ.

ದಸರಾ-ದೀಪಾವಳಿ ಹಬ್ಬದ ಅಪರೂಪದ ಸಂಗ್ರಹದಿಂದ ಗ್ರಾಹಕರನ್ನು ಆಕರ್ಷಿಸುತ್ತಿದೆ
ರಚನಾ ಸೆಕ್ಷನ್ಸ್
ಕಾಟನ್ ಕಲೆಕ್ಷನ್, ಕಲಂಕಾರಿ, ಕಲಾ ಕುಸುಮ್, ಶಾಲೂ ಸಿಲ್ಕ್, ಕಚ್ ವರ್ಕ್, ಅಪ್ಲಿಕ್ ವರ್ಕ್, ಕಟ್ ವರ್ಕ್, ಕಂಚಿ, ಬನಾಸರ್‌ಗಳ ಕೊಡುಗೆ
ಬನ್ನಿ... ಸಂಪರ್ಕಿಸಿ
8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ. ಮೊ. 98445 44111

ಶಿವ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ.,
ಬಸವೇಶ್ವರ ಬಡಾವಣೆ, ಮಲೇಬೆನ್ನೂರು 577530, ಹರಿಹರ (ತಾ)
ಸ್ಥಿರ ಸೊತ್ತಿನ ಬಹಿರಂಗ ಹರಾಜು ಪ್ರಕಟಣೆ ಮುಂದೂಡಿರುವ ಬಗ್ಗೆ
ಈ ಮೂಲಕ ಯಾವತ್ತೂ ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ, ಅನಿವಾರ್ಯ ಕಾರಣಗಳಿಂದ ದಿನಾಂಕ 12.10.2021ರ ಮಂಗಳವಾರದಂದು ನಡೆಯಬೇಕಾಗಿದ್ದ ಶ್ರೀ ಬೆಣ್ಣೆಹಳ್ಳಿ ಶಂಕ್ರಪ್ಪ ಬಿನ್ ಸಿದ್ದಪ್ಪ ಮಲೇಬೆನ್ನೂರು ರವರ ಅಡವು ಸಾಲದ ಸ್ಥಿರ ಸೊತ್ತಿನ ಬಹಿರಂಗ ಹರಾಜು ಪ್ರಕ್ರಿಯೆಯನ್ನು ಮುಂದೂಡಲಾಗಿದೆ.
(ಡಾ.ಬಿ. ಚಂದ್ರಶೇಖರ್) ಅಧ್ಯಕ್ಷರು (ಜಿ.ಎಂ. ನಳಿನ) ಪ್ರಭಾರ ಕಾರ್ಯದರ್ಶಿ (ಶ್ರೀ ಸುರೇಂದ್ರ ಜಿ.ಎಸ್) ಮಾರಾಟಾಧಿಕಾರಿಗಳು

# ಗ್ರಾ.ಪಂ. ಸದಸ್ಯನ ಮನೆಗೆ ಕನ್ನ

ದಾವಣಗೆರೆ, ಅ.11- ಗ್ರಾಮ ಪಂಚಾಯಿತಿ ಸದಸ್ಯರೋರ್ವರ ಮನೆಗೆ ಕನ್ನ ಹಾಕಿರುವ ಕಳ್ಳರು, 75,800 ರೂ. ಮೌಲ್ಯದ ಚಿನ್ನಾಭರಣ ಹಾಗೂ 25 ಸಾವಿರ ನಗದು ದೋಚಿರುವ ಘಟನೆ ಇಲ್ಲಿನ ಕೆಟಿಜೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಜಯನಗರ 'ಬಿ' ಬ್ಲಾಕ್‌ನ ಜಿ.ವಿ. ರಾಜು ಅವರು ಚಿಕ್ಕಜಾಜೂರು ಗ್ರಾಮ ಪಂಚಾಯತಿ ಸದಸ್ಯರಾಗಿದ್ದು, ಇವರ ಪತ್ನಿ ಪಾಮೇನಹಳ್ಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿ.

ರಾಜು ದಂಪತಿ ಭಾನುವಾರ ಕಾರ್ಯ ನಿಮಿತ್ತ ಮನೆಗೆ ಬೀಗ ಹಾಕಿಕೊಂಡು ಊರಿಗೆ ಹೋದ ಸಂದರ್ಭದಲ್ಲಿ, ಮನೆಯ ಮುಂಬಾಗಿಲು ಇಂಟರ್ ಲಾಕ್ ಮುರಿದು ಒಳನುಗ್ಗಿರುವ ಕಳ್ಳರು ಈ ಕೃತ್ಯನಡೆಸಿದ್ದಾರೆ.

# ಕೆಲಸ ಕೊಡಿಸುವ ನೆಪದಲ್ಲಿ ವಂಚನೆ

ದಾವಣಗೆರೆ, ಅ.11- ಕೆಲಸ ಕೊಡಿಸುವ ನೆಪದಲ್ಲಿ ಖಾಸಗಿ ಕಂಪನಿ ನೌಕರನಿಗೆ 52 ಸಾವಿರ ರೂ. ವಂಚಿರುವ ಬಗ್ಗೆ ಇಲ್ಲಿನ ಸಿಇಎನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಹರಿಹರ ತಾಲ್ಲೂಕಿನ ಬೆಳ್ಳೂಡಿಯ ಸಾದಿಕ್ ವಂಚನೆಗೊಳಗಾದ ಖಾಸಗಿ ಕಂಪನಿ ನೌಕರ. ದೂರವಾಣಿ ಮುಖಾಂತರ ಸಂಪರ್ಕಿಸಿದ ಅಪರಿಚಿತನು ಶೈನ್.ಕಾಂ ಜಾಬ್ ವೆಬ್‌ಸೈಟ್ ನಿಂದ ಕರೆ ಮಾಡುತ್ತಿರುವುದಾಗಿ ಪರಿಚಿತಗೊಂಡು ಈ ಕೃತ್ಯ ನಡೆಸಿದ್ದಾನೆ ಎಂದು ದೂರಲಾಗಿದೆ.

# ಹರಿಹರ ತಾಲ್ಲೂಕಿನಲ್ಲಿ ಲಸಿಕೆ ಅಭಿಯಾನ

ಹರಿಹರ, ಅ.11 - ಹರಿಹರ ತಾಲ್ಲೂಕಿನಾದ್ಯಂತ ಇಂದಿನಿಂದ ಇದೇ ದಿನಾಂಕ 14ರವರೆಗೆ ಕೋವಿಡ್ ಲಸಿಕೆ ಅಭಿಯಾನ ಕೈಗೊಳ್ಳಲಾಗಿದೆ.

ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಆಡಳಿತ ಕಛೇರಿ, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ-577001
ಹರಾಜು ದಿನಾಂಕ ತಿದ್ದುಪಡಿ ಪ್ರಕಟಣೆ
ದಿನಾಂಕ 09-10-2021 ರಂದು ಜನತಾವಾಣಿ ಮತ್ತು ನಗರವಾಣಿ ದಿನಪತ್ರಿಕೆಯಲ್ಲಿ ಪ್ರಕಟಣೆಯಾದ ಸ್ಥಿರ ಸೊತ್ತುಗಳ ಬಹಿರಂಗ ಹರಾಜು ಪ್ರಕಟಣೆ ದಿನಾಂಕವು 30-10-2021 ರ ಬದಲಾಗಿ ದಿನಾಂಕ 30-11-2021 ಎಂದು ತಪ್ಪಾಗಿ ನಮೂದಾಗಿರುತ್ತದೆ. ಆದ್ದರಿಂದ ಆಸಕ್ತರು ದಿನಾಂಕ 30-10-2021 ರಂದು ಬಿಡ್‌ನಲ್ಲಿ ಭಾಗವಹಿಸಬೇಕಾಗಿ ವಿನಂತಿ.
ಸಹಿ/- ಪ್ರಧಾನ ವ್ಯವಸ್ಥಾಪಕರು

ಪುರಸಭೆ ಕಾರ್ಯಾಲಯ ಹೊನ್ನಾಳಿ-577217
ಜಿಲ್ಲೆ : ದಾವಣಗೆರೆ ರಾಜ್ಯ : ಕರ್ನಾಟಕ
ಕ್ರಮಾಂಕ: ಹೊ.ಪು/ಜೆಇ/ಸಿಆರ್/02/2021-22 ದಿನಾಂಕ: 08-10-2021
ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಪುರಸಭೆ ಹೊನ್ನಾಳಿಯ ಬೀದಿ ದೀಪಗಳ ನಿರ್ವಹಣೆಗೆ (OPERATION AND MAINTENANCE) ಮೂಲಕ ನಿರ್ವಹಣೆ ಮಾಡಲು ಮತ್ತು ಕಚೇರಿಗೆ ಸಂಬಂಧಿಸಿದಂತೆ ಸ್ಟೇಷನರಿ ಸರಬರಾಜು ಮಾಡಲು ಅರ್ಹ ನೋಂದಾಯಿತ ಸರಬರಾಜುದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಗಮಗಳು 2000 ರಂತೆ ಈ ಕೆಳಗಿನಂತೆ ಕಾಮಗಾರಿಗಳ ((KW-1) ಮತ್ತು (KS-1) ನಿಯಮಾವಳಿಗಳಂತೆ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ಸರಬರಾಜುದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.eproc.karnataka.gov.in ನಲ್ಲಿ ಹಾಗೂ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು.

| ಕ್ರ.ಸಂ | ಕಾಮಗಾರಿ ಹೆಸರು |
|---|---|
| 1 | DMA/2020-21/OW/WORK_INDENT 109673 |
| 2 | DMA/2017-18/IND6089(1)/Call-3 |

ಅಧ್ಯಕ್ಷರು ಪುರಸಭೆ, ಹೊನ್ನಾಳಿ ಮುಖ್ಯಾಧಿಕಾರಿ ಪುರಸಭೆ, ಹೊನ್ನಾಳಿ



ಕಾಳಿಕಾದೇವಿ ರಸ್ತೆಯ ಶ್ರೀ ಕಾಳಿಕಾದೇವಿ ದೇವಸ್ಥಾನದಲ್ಲಿ ಕನ್ನಿಕಾ ಪರಮೇಶ್ವರಿ ಅಲಂಕಾರ



ಕೆಟಿಜೆ ನಗರದ ರಾಜರಾಜೇಶ್ವರಿ ತಾಯಿಗೆ ನಾನಾಲಂಕಾರ

ನವರಾತ್ರಿ ಪ್ರಯುಕ್ತ ನಗರದಲ್ಲಿರುವ ವಿವಿಧ ದೇವತೆಗಳು ಪ್ರತಿ ದಿನವೂ ನಾನಾಲಂಕಾರದಲ್ಲಿ ಕಂಗೊಳಿಸುತ್ತಿದ್ದು, ಅಂತೆಯೇ ಕೆಟಿಜೆ ನಗರ 17ನೇ ಕ್ರಾಸ್ ನಲ್ಲಿರುವ ರಾಜರಾಜೇಶ್ವರಿ ದೇವಸ್ಥಾನದಲ್ಲಿ ರಾಜರಾಜೇಶ್ವರಿ ಅಮ್ಮನವರಿಗೆ ಅರಿಶಿನ ಕೊಂಬಿನಲಂಕಾರ, ಗಂಧದಲಂಕಾರ, ಮಾತಂಗಿ ಅಲಂಕಾರ, ಚಂದ್ರಕಲಾ ಅಲಂಕಾರ ಹೀಗೆ ನಾನಾಲಂಕಾರದಲ್ಲಿ ಕಂಗೊಳಿಸುವಂತೆ ಮಾಡಲಾಗುತ್ತಿದೆ.



ರಾಜೇಂದ್ರ ಬಡಾವಣೆಯ ಶ್ರೀ ಬನಶಂಕರಿ ದೇವಿಗೆ ನಾಣ್ಯಾಲಂಕಾರ

ನಗರದ ಡಿಸಿಎಂ ಟೌನ್ ಶಿಪ್ ಬಳಿ ರಾಜೇಂದ್ರ ಬಡಾವಣೆಯ ಶ್ರೀ ಬನಶಂಕರಿ ದೇವಾಲಯದಲ್ಲಿ ಶ್ರೀ ಬನಶಂಕರಿದೇವಿ ಸೋಮವಾರ ನಾಣ್ಯಾಲಂಕಾರದಲ್ಲಿ ಭಕ್ತರಿಗೆ ದರ್ಶನ ನೀಡಿದಳು. ದೇವಸ್ಥಾನದಲ್ಲಿನ ಗಾಯತ್ರಿ ಮತ್ತು ಮಹಾಲಕ್ಷ್ಮೀ ದೇವಿ ಅಮ್ಮನವರಿಗೂ ನೋಟುಗಳಲ್ಲಿ ವಿಶೇಷವಾಗಿ ಅಲಂಕಾರ ಮಾಡಲಾಗಿತ್ತು.

## ಸ್ವಿಸ್ ಬ್ಯಾಂಕ್ ಖಾತೆಗಳ ಮೂರನೇ ವಿವರ ಸಲ್ಲಿಕೆ

ನವದೆಹಲಿ, ಅ. 11 – ಸ್ವಿಸ್ ಬ್ಯಾಂಕುಗಳಲ್ಲಿ ಭಾರತೀಯರು ಇರಿಸಿರುವ ಹಣದ ಕುರಿತು ಮೂರನೇ ವಿವರವನ್ನು ಸ್ವಿಟ್ಜರ್‌ಲ್ಯಾಂಡ್ ಹಂಚಿಕೊಂಡಿದೆ. ಸ್ವಿಸ್ ತೆರಿಗೆ ಅಧಿಕಾರಿಗಳು ಒಟ್ಟು 96 ದೇಶಗಳ ಜೊತೆ 33 ಲಕ್ಷ ಖಾತೆಗಳ ವಿವರಗಳನ್ನು ಹಂಚಿಕೊಂಡಿದ್ದಾರೆ. 70 ದೇಶಗಳ ಜೊತೆ ಸ್ವಿಸ್ ಮಾಹಿತಿಯನ್ನು ವಿನಿಮಯ ಮಾಡಿಕೊಂಡಿದೆ. ಉಳಿದ 26 ದೇಶಗಳಿಂದ ಯಾವುದೇ ಮಾಹಿತಿ ಪಡೆದಿಲ್ಲ.

ಮಾಹಿತಿ ಪಡೆದಿರುವ ದೇಶಗಳ ಪಟ್ಟಿಯಲ್ಲಿ ಭಾರತ ಸಹ ಇದೆ. ಕಳೆದ ತಿಂಗಳು ಮಾಹಿತಿ ಹಂಚಿಕೊಳ್ಳಲಾಗಿದೆ. 2022ರ ಸೆಪ್ಟೆಂಬರ್‌ನಲ್ಲಿ ಮುಂದಿನ ಕಂತಿನ ಮಾಹಿತಿ ಹಂಚಿಕೊಳ್ಳಲಾಗುವುದು.

## ಬ್ಯಾಂಕುಗಳಿಗೆ 862 ಕೋಟಿ ರೂ. ವಂಚನೆ : ಸಿಬಿಐನಿಂದ ಎಫ್‌ಐಆರ್

ನವದೆಹಲಿ, ಅ. 11 – 2009ರಿಂದ 2017ರ ನಡುವೆ ಎಸ್.ಬಿ.ಐ. ನೇತೃತ್ವದ ಬ್ಯಾಂಕುಗಳ ಕೂಟಕ್ಕೆ 862 ಕೋಟಿ ರೂ. ವಂಚನೆ ಮಾಡಿದ ಆರೋಪದ ಮೇಲೆ ಟ್ರೈಮ್ಯಾಕ್ಸ್ ಐ.ಟಿ. ಇನ್‌ಫ್ರಾಸ್ಟ್ರಕ್ಚರ್ ಅಂಡ್ ಸರ್ವೀಸಸ್ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ.

ಸಿಬಿಐ ದಾಖಲಿಸಿರುವ ಎಫ್.ಐ.ಆರ್.ನಲ್ಲಿ ಟಿ.ಐ.ಐ.ಎಸ್.ಎಲ್. ವ್ಯವಸ್ಥಾಪಕ ನಿರ್ದೇಶಕ ಸೂರ್ಯ ಪ್ರಕಾಶ್ ಮದ್ರೇಚ ಹಾಗೂ ನಿರ್ದೇಶಕ ಚಂದ್ರ ಪ್ರದೇಶ್ ಮದ್ರೇಚ ಹೆಸರುಗಳೂ ಸಹ ಇವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಎಫ್.ಐ.ಆರ್. ನಂತರ ಆರೋಪಿಗಳ ಒಂಭತ್ತು ತಾಣಗಳ ಮೇಲೆ ಸಿಬಿಐ ದಾಳಿ ನಡೆಸಿದೆ.

## ಅಕ್ರಮ ಸಾಗಾಟ: ಪಡಿತರ ಅಕ್ಕಿ ವಶ

ದಾವಣಗೆರೆ, ಅ.11- ನಗರದ ಕಡೆಯಿಂದ ಚಿತ್ರದುರ್ಗದ ಕಡೆಗೆ ಅಕ್ರಮವಾಗಿ ಪಡಿತರ ಅಕ್ಕಿಯನ್ನು ಲಾರಿಯಲ್ಲಿ ಸಾಗಾಟ ಮಾಡುತ್ತಿದ್ದ ವೇಳೆ ದಾಳಿ ನಡೆಸಿರುವ ಪೊಲೀಸರು 3.59 ಲಕ್ಷ ಮೌಲ್ಯದ 239.50 ಕ್ವಿಂಟಾಲ್ ಪಡಿತರ ಅಕ್ಕಿ ಹಾಗೂ ಒಂದು ಲಾರಿಯನ್ನು ವಶಪಡಿಸಿಕೊಂಡಿದ್ದಾರೆ.

ಜಿಲ್ಲಾ ಪೊಲೀಸ್ ಕಚೇರಿಯ ಡಿಸಿಆರ್‌ಬಿ ಡಿವೈಎಸ್ಪಿ ಬಿ.ಎಸ್.ಬಸವರಾಜ್ ಹಾಗೂ ವಿದ್ಯಾನಗರ ಪಿಎಸ್ಐ ಪ್ರಸಾದ್, ಆಹಾರ ನಿರೀಕ್ಷಕಿ ಶಬಾನ ಪರ್ವೀನ್ ಮತ್ತು ಪೊಲೀಸ್ ಸಿಬ್ಬಂದಿಗಳ ತಂಡವು ದಾಳಿ ನಡೆಸಿದೆ.

ಈ ಸಂಬಂಧ ಆರೋಪಿತರ ವಿರುದ್ಧ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಪ್ಯಾರಾಲಿಂಪಿಕ್ ಸ್ಪರ್ಧಿಗಳಿಗೆ ಲಕ್ಷ ರೂ.

ಬೆಂಗಳೂರು, ಅ. 11 - ಟೋಕಿಯೋ ಒಲಿಂಪಿಕ್ ಮತ್ತು ಪ್ಯಾರಾಲಿಂಪಿಕ್‌ನಲ್ಲಿ ಭಾಗವಹಿಸಿದ್ದ ಕ್ರೀಡಾಪಟುಗಳು ಮತ್ತು ತರಬೇತುದಾರರಿಗೆ ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ತಲಾ ಒಂದು ಲಕ್ಷ ರೂ. ನೀಡಿ ಸನ್ಮಾನಿಸಿದ್ದಾರೆ.

ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ಡಾ. ಕೆ.ಸಿ. ನಾರಾಯಣ ಗೌಡ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಗೋವಿಂದರಾಜು ಉಪಸ್ಥಿತರಿದ್ದರು.

# ಯುವ ಪೀಳಿಗೆಗೆ ಮದುವೆ, ಮಕ್ಕಳಲ್ಲಿ ಆಸಕ್ತಿ ಕಡಿಮೆ

### ಸಮೀಕ್ಷಾ ವರದಿ ಮೂಲಕ ಸುಧಾಕರ್ ಸಮರ್ಥನೆ



ಬೆಂಗಳೂರು, ಅ. 11 – ಆಧುನಿಕ ಮಹಿಳೆ ಮದುವೆ ಹಾಗೂ ಮಕ್ಕಳನ್ನು ಬಯಸುತ್ತಿಲ್ಲ ಎಂಬ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿರುವ ಆರೋಗ್ಯ ಸಚಿವ ಡಾ. ಕೆ.ಸುಧಾಕರ್, ಯುವ ಪೀಳಿಗೆ ಮದುವೆ ಹಾಗೂ ಮಕ್ಕಳ ಬಗ್ಗೆ ಹೊಂದಿರುವ ನಿಲುವಿನ ಕುರಿತು ಸಮೀಕ್ಷಾ ವರದಿಯನ್ನು ಉಲ್ಲೇಖಿಸಿದ್ದಾರೆ.

ವಿಶ್ವ ಮಾನಸಿಕ ಆರೋಗ್ಯ ದಿನದಂದು ನಿಮ್ಹಾನ್ಸ್‌ನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಮಾತನಾಡುತ್ತಿದ್ದ ಸುಧಾಕರ್, ಸಾಕಷ್ಟು ಆಧುನಿಕ ಮಹಿಳೆಯರು ಒಂಟಿಯಾಗಿರಲು ಬಯಸುತ್ತಾರೆ. ಅವರು ಮದುವೆಯಾದರೂ, ಮಕ್ಕಳನ್ನು ಹೊಂದಲು ಬಯಸುತ್ತಿಲ್ಲ. ಅವರು ಬಾಡಿಗೆ ತಾಯಂದಿರನ್ನು ಬಯಸುತ್ತಿದ್ದಾರೆ. ಈ ಬದಲಾವಣೆ ಒಳ್ಳೆಯದಲ್ಲ ಎಂದಿದ್ದರು.

ಈ ಮಾತಿಗೆ ಟೀಕೆಗಳು ವ್ಯಕ್ತವಾದ ನಂತರ ಸ್ಪಷ್ಟನೆ ನೀಡಿರುವ ಸುಧಾಕರ್, ನನ್ನ ಹತ್ತೊಂಬತ್ತುವರೆ ನಿಮಿಷದ ಭಾಷಣದ ಒಂದು ಸಣ್ಣ ಭಾಗವನ್ನು ತೆಗೆದುಕೊಂಡು ಅದನ್ನು ತಿರುಚಿ ಬಿಂಬಿಸಲಾಗುತ್ತಿದೆ. ಪ್ರತಿಷ್ಠಿತ ನಿಮ್ಹಾನ್ಸ್‌ನಲ್ಲಿ ನಾನು ಹೇಳಲು ಬಯಸಿದ್ದ ದೊಡ್ಡ ಅಂಶವನ್ನು ಅವರು ಕಡೆಗಣಿಸುತ್ತಿದ್ದಾರೆ ಎಂದಿದ್ದಾರೆ.

ಹೆಣ್ಣು ಮಗುವಿನ ತಂದೆಯಾಗಿ ಹಾಗೂ ವೈದ್ಯಕೀಯ ವೃತ್ತಿಯವನಾಗಿ ನನಗೆ ಮಹಿಳೆಯರ ಸಂವೇದನೆ ಹಾಗೂ ಮಾನಸಿಕ ಆರೋಗ್ಯದ ವಿಷಯದ ಬಗ್ಗೆ ತಿಳಿದಿದೆ ಎಂದೂ ಅವರು ಹೇಳಿದ್ದಾರೆ.

ಇಂಡಿಯನ್ ಜರ್ನಲ್ ಆಫ್ ಸೈಕಿಯಾಟ್ರಿ ಸಂಶೋಧನಾ ವರದಿಯನ್ನು ಉಲ್ಲೇಖಿಸಿರುವ ಅವರು, ಯುವ ಪೀಳಿಗೆ ಮದುವೆ ಹಾಗೂ ಮಕ್ಕಳನ್ನು ಹೊಂದುವುದರಿಂದ ದೂರವಾಗುತ್ತಿದೆ ಎಂದಿದ್ದಾರೆ.

ಯುಗವ್ - ಮಿಂಟ್ - ಸಿಪಿಆರ್ ಮಿಲೇನಿಯಲ್ ಸರ್ವೆ ಪ್ರಕಾರ, ಶೇ.19ರಷ್ಟು ಯುವಕರು ಮಕ್ಕಳು ಇಲ್ಲವೇ ಮದುವೆಯಲ್ಲಿ ಆಸಕ್ತಿ ಹೊಂದಿಲ್ಲ. ಶೇ.8ರಷ್ಟು ಯುವಕರಿಗೆ ಮಕ್ಕಳು ಬೇಕಾಗಿದೆಯಾದರೂ, ಮದುವೆಯಲ್ಲಿ ಆಸಕ್ತಿ ಇಲ್ಲ.

ಈ ಶತಮಾನದಲ್ಲಿ ಜನಿಸಿದ ಹದಿಹರೆಯದವರಲ್ಲಿ ಶೇ.23ರಷ್ಟು ಯುವಕ – ಯುವತಿಯರಿಗೆ ಮದುವೆ ಇಲ್ಲವೇ ಮಕ್ಕಳು ಎರಡರಲ್ಲೂ ಆಸಕ್ತಿ ಇಲ್ಲ. ಈ ವಿದ್ಯಮಾನದಲ್ಲಿ ಗಂಡು ಹಾಗೂ ಹೆಣ್ಣಿನ ನಡುವೆ ವ್ಯತ್ಯಾಸವಿಲ್ಲ ಎಂದವರು ಹೇಳಿದ್ದಾರೆ.

ಈ ವಿಷಯದಲ್ಲಿ ನಾನು ಮಹಿಳೆಯನ್ನು ಪ್ರತ್ಯೇಕವಾಗಿ ಉಲ್ಲೇಖಿಸಿಲ್ಲ ಹಾಗೂ ಅಂತಹ ಉದ್ದೇಶವೂ ತಮ್ಮದಾಗಿಲ್ಲ. ಜನರು ತಮ್ಮ ಫೇಸ್‌ಬುಕ್‌ನಲ್ಲಿ ಪ್ರಕಟಿಸಿರುವ ಪೂರ್ಣ ಭಾಷಣವನ್ನು ನೋಡಬಹುದು ಎಂದು ಸಚಿವರು ತಿಳಿಸಿದ್ದಾರೆ.

ಮಾನಸಿಕ ಆರೋಗ್ಯ ಸಂಪನ್ಮೂಲದ ಕೊರತೆ ಇರುವುದು ಹಲವಾರು ಸಂಶೋಧನೆ ಹಾಗೂ ಅಧ್ಯಯನದಿಂದ ತಿಳಿದು ಬಂದಿದೆ. ಇಂತಹ ಸಂದರ್ಭದಲ್ಲಿ ಕುಟುಂಬಗಳು ಅಮೂಲ್ಯವಾದ ಬೆಂಬಲ ವ್ಯವಸ್ಥೆ ಹೊಂದಿವೆ. ಇವು ಹಲವಾರು ಒತ್ತಡದ ಪರಿಸ್ಥಿತಿ ನಿಭಾಯಿಸಲು ನೆರವಾಗುತ್ತವೆ. ಭಾರತೀಯ ಸಮಾಜ ಸಾಮೂಹಿಕ ಮನೋಭಾವದ ಹಾಗೂ ಸಾಮಾಜಿಕ ಸಾಮರಸ್ಯ ಮತ್ತು ಅಂತರ ಅವಲಂಬನೆಯನ್ನು ಉತ್ತೇಜಿಸುತ್ತದೆ ಎಂದವರು ಹೇಳಿದ್ದಾರೆ.

ಭಾರತೀಯರು ಕೂಡು ಕುಟುಂಬದ ಸಂಪ್ರದಾಯ ಹೊಂದಿದ್ದರೆ. ಇಂತಹ ಕುಟುಂಬಗಳಲ್ಲಿ ಮಾನಸಿಕ ಅಸ್ವಸ್ಥತೆಯ ಕಾಳಜಿಗೆ ಅತ್ಯುತ್ತಮ ಸಂಪನ್ಮೂಲವಿದೆ. ವಿದೇಶಿ ಸಂಸ್ಕೃತಿ ವ್ಯಕ್ತಿವಾದಕ್ಕೆ ಬೆಂಬಲ ನೀಡಿದರೆ, ಭಾರತೀಯ ಸಮಾಜ ಸಮೂಹ ದೃಷ್ಟಿಗೆ ಒತ್ತು ನೀಡುತ್ತದೆ. ಹೀಗಾಗಿಯೇ ವಿದೇಶಿಯರಿಗೆ ಹೋಲಿಸಿದರೆ ಭಾರತೀಯ ಕುಟುಂಬಗಳಿಗೆ ಅನಾರೋಗ್ಯದ ಹೆಚ್ಚಿನ ಹೊರೆ ಹೊರಲು ಸಾಧ್ಯವಾಗುತ್ತಿದೆ ಎಂದವರು ತಿಳಿಸಿದ್ದಾರೆ.

# ಧಾರಾಕಾರ ಮಳೆ : ಮನೆಗಳಿಗೆ ನುಗ್ಗಿದ ನೀರು

### ಭಾನುವಳ್ಳಿ, ಯಲವಟ್ಟಿ ಗ್ರಾಮಗಳಲ್ಲಿ ಜನಜೀವನ ಅಸ್ತವ್ಯಸ್ತ

ಮಲೇಬೆನ್ನೂರು, ಅ.11- ಸೋಮವಾರ ಸಂಜೆ 6.30 ರಿಂದ ಶುರುವಾದ ಮಳೆ ತಡ ರಾತ್ರಿವರೆಗೂ ಧಾರಾಕಾರವಾಗಿ ಸುರಿದ ಪರಿಣಾಮವಾಗಿ ತಗ್ಗು ಪ್ರದೇಶಗಳಲ್ಲಿ ಇದ್ದ ಮನೆಗಳಿಗೆ ನೀರು ನುಗ್ಗಿ ಜನಜೀವನ ಅಸ್ತವ್ಯಸ್ತಗೊಂಡಿದೆ.

ಯಲವಟ್ಟಿ ಗ್ರಾಮದ ತಾಂಡಾದಲ್ಲಿ ಭತ್ತದ ಗದ್ದೆಗಳ ಮೂಲಕ ಹರಿದು ಬಂದ ಮಳೆ ನೀರು, ಸುಮಾರು 30 ಮನೆಗಳಿಗೆ ನುಗ್ಗಿದ್ದು, ಮನೆ ಸಾಮಾನುಗಳು ನೀರಿನಲ್ಲಿ ತೇಲಾಡುತ್ತಿವೆ ಎಂದು ತಾಂಡಾದ ಕೊಟ್ರೇಶ್ ನಾಯ್ಕ, ಆನಂದ್ ನಾಯ್ಕ 'ಜನತಾವಾಣಿ'ಗೆ ರಾತ್ರಿ 10 ಗಂಟೆಗೆ ಸುಮಾರಿಗೆ ಮಾಹಿತಿ ನೀಡಿದರು.

ಯಲವಟ್ಟಿ ಅಷ್ಟೇ ಅಲ್ಲದೇ ಮಲೇಬೆನ್ನೂರು, ಜಿಗಳಿ, ಭಾನುವಳ್ಳಿ, ಕಮಲಾಪುರ, ಸಿರಿಗೆರೆ ಮತ್ತಿತರೆ ಗ್ರಾಮಗಳಲ್ಲೂ ಮನೆಗಳಿಗೆ ನೀರು ನುಗ್ಗಿರುವ ಬಗ್ಗೆ ವರದಿಯಾಗಿದ್ದು, ಜನರು ರಾತ್ರಿಯಿಡೀ ನೀರನ್ನು ಮನೆಯಿಂದ ಹಾಕುವ ಕೆಲಸ ಮಾಡಿದ್ದಾರೆ.

ಭಾರೀ ಮಳೆಯಿಂದಾಗಿ ಎಲ್ಲಾ ಕಾಲುವೆಗಳು, ಹಳ್ಳ - ಕೊಳ್ಳಗಳು ತುಂಬಿ ಹರಿದಿವೆ. ಕೆಲವಡೆ ಚರಂಡಿ ನೀರಿನ ಪೈಪ್‌ಗಳು ಕಸ - ಕಡ್ಡಿಗಳಿಂದ ಮುಚ್ಚಿರುವುದರಿಂದ ಚರಂಡಿ ನೀರು ರಸ್ತೆ, ರಸ್ತೆ ಅಕ್ಕ - ಪಕ್ಕದ ಮನೆಗಳ ಆವರಣಕ್ಕೆ ನುಗ್ಗಿದೆ.



### ಮಲೆನಾಡಿನಲ್ಲೂ ಭಾರೀ ಮಳೆ : ಸಂಪರ್ಕ ಸೇತುವೆಗಳು ಮುಳುಗಡೆ

ಇತ್ತ ಮಲೆನಾಡಿನಲ್ಲೂ ಚಿತ್ತಾ ಮಳೆ ಭಾರೀ ಪ್ರಮಾಣದಲ್ಲಿ ಸುರಿದಿದ್ದು, ಸೋಮವಾರ ಸಂಜೆ ವೇಳೆಗೆ ಅನೇಕ ಸಂಪರ್ಕ ಸೇತುವೆಗಳು ನೀರಿನಲ್ಲಿ ಮುಳುಗಡೆ ಆಗಿರುವ ಬಗ್ಗೆ ವರದಿಯಾಗಿದೆ. ಬಾಳೆಹೊನ್ನೂರು - ಕಳಸ ಮತ್ತು ಕಳಸ - ಹೊರನಾಡು ಸಂಪರ್ಕ ಕಡಿತಗೊಂಡಿದೆ ಎನ್ನಲಾಗಿದೆ.

ಭದ್ರಾ ಮತ್ತು ತುಂಗಾ ಜಲಾಶಯಗಳಿಗೆ ಒಳಹರಿವು ಹೆಚ್ಚಾಗುತ್ತಿದ್ದು, ಯಾವುದೇ ಕ್ಷಣದಲ್ಲಿ ನದಿಗೆ ನೀರು ಹರಿಸುವ ಸಾಧ್ಯತೆ ಇರುವುದರಿಂದ ತುಂಗಭದ್ರಾ ನದಿ ಪಾತ್ರದ ಜನರು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಮಲೇಬೆನ್ನೂರು ಉಪತಹಶೀಲ್ದಾರ್ ಆರ್.ರವಿ ಮನವಿ ಮಾಡಿದ್ದಾರೆ.

ಮಲೇಬೆನ್ನೂರು ಹೋಬಳಿಯ ಅನೇಕ ಗ್ರಾಮಗಳಲ್ಲಿ ಮನೆಗಳಿಗೆ ಮಳೆ ನೀರು ನುಗ್ಗಿರುವ ಬಗ್ಗೆ ವರದಿಯಾಗಿದ್ದು, ಮಂಗಳವಾರ ಬೆಳಗ್ಗೆ ಸ್ಥಳ ಪರಿಶೀಲನೆ ಮಾಡುವುದಾಗಿ ರವಿ ತಿಳಿಸಿದ್ದಾರೆ.

**ಮಳೆ ಪ್ರಮಾಣ** : ಸೋಮವಾರ ರಾತ್ರಿ ಸುರಿದ ಮಳೆ ಪ್ರಮಾಣ ಲಭ್ಯವಾಗಿದ್ದು, ಮಲೇಬೆನ್ನೂರು ಹೋಬಳಿಯಲ್ಲಿ ಸರಾಸರಿ 80 ಮಿ.ಮೀ ಮಳೆಯಾಗಿರುವ ಬಗ್ಗೆ ವರದಿಯಾಗಿದೆ. ಭಾನುವಳ್ಳಿಯಲ್ಲಿ 72.5 ಮಿ.ಮೀ, ನಂದಿಗಾವಿಯಲ್ಲಿ 75.9 ಮಿ.ಮೀ, ಕೆ.ಎನ್.ಹಳ್ಳಿ 77.2 ಮಿ.ಮೀ, ಮಲೇಬೆನ್ನೂರು ಪಟ್ಟಣದಲ್ಲಿ 68.5 ಮಿ.ಮೀ ಮಳೆಯಾಗಿದೆ. ಅತಿ ಹೆಚ್ಚು ಎಂದರೆ ಯಲವಟ್ಟಿಯಲ್ಲಿ 127.5 ಮಿ.ಮೀ ಮತ್ತು ಕೊಕ್ಕನೂರಿನಲ್ಲಿ 128.5 ಮಿ.ಮೀ ಮಳೆಯಾಗಿದೆ ಎಂದು ಉಪ ತಹಶೀಲ್ದಾರ್ ಆರ್.ರವಿ ಮಾಹಿತಿ ನೀಡಿದ್ದಾರೆ.

## ಪ್ರಯಾಣಿಕರ ವಲಯದಲ್ಲಿ ರೈಲ್ವೆ ಆದಾಯ ಹೆಚ್ಚಳ

ನವದೆಹಲಿ, ಅ. 11 – ಕೊರೊನಾ ನಿರ್ಬಂಧಗಳನ್ನು ಸಡಿಲಿಸಿರುವ ಹಾಗೂ ಹಬ್ಬದ ದಿನಗಳು ಆರಂಭವಾಗಿರುವ ಹಿನ್ನೆಲೆಯಲ್ಲಿ 2021-22ರ ಎರಡನೇ ಚತುರ್ಥದಲ್ಲಿ ಪ್ರಯಾಣಿಕರ ವಲಯದಲ್ಲಿ ರೈಲ್ವೆ ಗಳಿಸುವ ಆದಾಯ ಶೇ.113ರಷ್ಟು ಹೆಚ್ಚಾಗಿದೆ.

2020-21ರಲ್ಲಿ ರೈಲ್ವೆಯು ಪ್ರಯಾಣಿಕರ ವಲಯದಿಂದ ಗಳಿಸುವ ಆದಾಯ ಗಣನೀಯವಾಗಿ ಕುಗ್ಗಿತ್ತು. ಕಳೆದ ವರ್ಷವಿಡೀ ಪ್ರಯಾಣಿಕರ ವಿಭಾಗದ ಮೇಲೆ ಗಂಭೀರ ಪರಿಣಾಮವಾಗಿತ್ತು. ಈಗ ಸಾಮಾನ್ಯ ಸಮಯದ ಶೇ.96ರಷ್ಟು ರೈಲುಗಳು ಸಂಚಾರ ನಡೆಸುತ್ತಿವೆ.

ಮಧ್ಯ ಪ್ರದೇಶದ ಚಂದ್ರ ಶೇಖರ್ ಗೌರ್ ಅವರು ದಾಖಲಿಸಿದ್ದ ಮಾಹಿತಿ ಹಕ್ಕು ಅರ್ಜಿಗೆ ಉತ್ತರಿಸಿರುವ ರೈಲ್ವೆ ಸಚಿವಾಲಯ, ಪ್ರಸಕ್ತ ವರ್ಷದ ಮೊದಲ ಚತುರ್ಥದಲ್ಲಿ ಪ್ರಯಾಣಿಕರ ವಿಭಾಗದಿಂದ ರೈಲ್ವೆಗೆ 4,921.11 ಕೋಟಿ ರೂ. ಆದಾಯ ದೊರೆತಿತ್ತು. ಅದು ಎರಡನೇ ಚತುರ್ಥದಲ್ಲಿ 10,513.07 ಕೋಟಿ ರೂ.ಗಳಿಗೆ ಹೆಚ್ಚಾಗಿದೆ.

ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ರೈಲ್ವೆ ಕೇವಲ ವಿಶೇಷ ರೈಲುಗಳನ್ನು ನಿರ್ವಹಿಸಿತ್ತು. ನಂತರ ದೀರ್ಘ ಪ್ರಯಾಣದ ರೈಲುಗಳನ್ನು ಆರಂಭಿಸಿದೆ. ಈಗ ತುಸು ಹೆಚ್ಚಿನ ದರದಲ್ಲಿ ಅಲ್ಪ ದೂರ ಪ್ರಯಾಣಿಸುವ ವಿಶೇಷ ರೈಲುಗಳನ್ನು ನಿರ್ವಹಿಸುತ್ತಿದೆ.

## ಅಮೆರಿಕದ ಮೂವರು ಅರ್ಥಶಾಸ್ತ್ರಜ್ಞರಿಗೆ ನೊಬೆಲ್

ಸ್ಟಾಕ್‌ಹೋಮ್, ಅ. 11 – ಅಮೆರಿಕದ ಮೂವರು ಅರ್ಥಶಾಸ್ತ್ರಜ್ಞರು 2021ರ ಸಾಲಿನ ನೊಬೆಲ್ ಪ್ರಶಸ್ತಿ ಪಡೆದಿದ್ದಾರೆ. ಕನಿಷ್ಠ ಕೂಲಿ, ವಲಸೆ ಹಾಗೂ ಶಿಕ್ಷಣದ ಕುರಿತು ಅಧ್ಯಯನ ನಡೆಸಿದ್ದಕ್ಕಾಗಿ ಈ ಪ್ರಶಸ್ತಿ ನೀಡಲಾಗಿದೆ.

ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಡೇವಿಡ್ ಕಾರ್ಡ್ ಅವರಿಗೆ ಪ್ರಶಸ್ತಿ ಅರ್ಧ ಭಾಗ ನೀಡಲಾಗಿದೆ. ಉಳಿದರ್ಧವನ್ನು ಎಂ.ಐ.ಟಿ.ಯ ಜೊಶುವಾ ಆಂಗ್ರಿಸ್ಟ್ ಮತ್ತು ಸ್ಟಾನ್‌ಫೋರ್ಡ್ ವಿಶ್ವವಿದ್ಯಾನಿಲಯದ ಗ್ಯೂಡೊ ಇಂಬೆನ್ಸ್ ಅವರಿಗೆ ನೀಡಲಾಗಿದೆ.

ಈ ಮೂವರು ಆರ್ಥಿಕ ಪರಿಣಿತರು ಅರ್ಥಶಾಸ್ತ್ರದ ಚಿಂತನೆಯನ್ನು ಸಂಪೂರ್ಣ ಬದಲಿಸಿದ್ದಾರೆ ಎಂದು ಪ್ರಶಸ್ತಿ ನೀಡುವ ದಿ ರಾಯಲ್ ಸ್ವೀಡಿಶ್ ಅಕಾಡೆಮಿ ತಿಳಿಸಿದೆ.

# ಅಕ್ರಮ ಸಾಗಾಟದ 28 ಗೋವುಗಳನ್ನು ರಕ್ಷಿಸಿದ ಹಿಂದೂ ಜಾಗರಣ ವೇದಿಕೆ

ದಾವಣಗೆರೆ, ಅ.11- ಗೋವುಗಳ ಅಕ್ರಮ ಸಾಗಾಟದ ಜಾಲ ಪತ್ತೆ ಮಾಡಿರುವ ಇಲ್ಲಿನ ಹಿಂದೂ ಜಾಗರಣ ವೇದಿಕೆಯು ಕಂಟೇನರ್ ಮತ್ತು ಲಾರಿಗಳಲ್ಲಿ ಸಾಗಿಸಲಾಗುತ್ತಿದ್ದ 28 ಗೋವುಗಳನ್ನು ರಕ್ಷಿಸಿರುವ ಘಟನೆ ನಗರದ ಹೊರ ವಲಯದಲ್ಲಿ ಭಾನುವಾರ ರಾತ್ರಿ ನಡೆದಿದೆ.

ರಾಣೇಬೆನ್ನೂರು ಕಡೆಯಿಂದ ಬೆಂಗಳೂರಿಗೆ ರಾಷ್ಟ್ರೀಯ ಹೆದ್ದಾರಿಯ ಮುಖೇನ ಕಂಟೇನರ್‌ನಲ್ಲಿ 28 ಹಸುಗಳು, ಎತ್ತುಗಳನ್ನು ಯಾವುದೇ ಸೂಕ್ತ ದಾಖಲೆ, ಸಂಬಂಧಿಸಿದ ಇಲಾಖೆ ಪರವಾನಿಗೆ ಪಡೆಯದೇ ಹಿಂಸಾತ್ಮಕವಾಗಿ ತುಂಬಿಕೊಂಡು, ಅವುಗಳನ್ನು ಕಸಾಯಿಖಾನೆಗೆ ಸಾಗಿಸಲಾಗುತ್ತಿತ್ತು ಎನ್ನಲಾಗಿದೆ.

ಈ ಬಗ್ಗೆ ಮಾಹಿತಿ ಆಧರಿಸಿ ಸ್ಥಳಕ್ಕಾಗಮಿಸಿದ ವಿದ್ಯಾನಗರ ಪೊಲೀಸರು, ಹಿಂಜಾವೇ ಪದಾಧಿಕಾರಿಗಳ ಸಹಿತ ದಾಳಿ ಮಾಡಿ, ಗೋವುಗಳ ರಕ್ಷಿಸಿದ್ದಾರೆ. ಸರ್ಕಾರವು ಅಕ್ರಮವಾಗಿ, ಹಿಂಸಾತ್ಮಕವಾಗಿ ಗೋವುಗಳ ಸಾಗಾಟ ನಿಷೇಧಿಸಿದೆ. ಅಲ್ಲದೇ, ಗೋವುಗಳ ರಕ್ಷಣೆಗಾಗಿ ಬಿಗಿಯಾದ ಕಾನೂನು ಜಾರಿಗೆ ತಂದಿದೆ.ಹೀಗಿದ್ದರೂ ಕಾಯ್ದೆ, ಕಾನೂನುಗಳು ಕೇವಲ ಪುಸ್ತಕಕ್ಕೆ ಸೀಮಿತವಾಗಿದ್ದು, ಪೂಜನೀಯ ಗೋವುಗಳ ರಕ್ಷಣೆಗೆ ಸರ್ಕಾರ ಮುಂದಾಗಲಿ ಎಂದು ಹಿಂಜಾವೇ ಕಾರ್ಯಕರ್ತರು ಒತ್ತಾಯಿಸಿದ್ದಾರೆ.

ಕಂಟೇನರ್‌ನಲ್ಲಿದ್ದ 18 ಹಸುಗಳು ಹಾಗೂ ಮತ್ತೊಂದು ಲಾರಿಯಲ್ಲಿ ತುಂಬಿದ್ದ 6 ರಾಸುಗಳನ್ನು ರಕ್ಷಿಸಿ ಹೆಬ್ಬಾಳ ಮತ್ತು ಆವರಗೆರೆ ಗೋಶಾಲೆಗಳಿಗೆ ಸುರಕ್ಷಿತವಾಗಿ ಒಪ್ಪಿಸಲಾಗಿದೆ ಎಂದು ಹಿಂಜಾವೇ ಮುಖಂಡ ಸತೀಶ್ ಪೂಜಾರಿ ತಿಳಿಸಿದ್ದಾರೆ.

ಈ ಸಂಬಂಧ ವಿದ್ಯಾನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಕಣ್ಮನ ಸೆಳೆದ 'ದಾಂಡಿಯಾ ರಾಸ್'



ದಾವಣಗೆರೆ, ಅ.11- ಲೇಡಿಸ್ ಕ್ಲಬ್ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಇಂದು ಸಂಜೆ ಆಯೋಜಿಸಿದ್ದ 'ದಾಂಡಿಯಾ ರಾಸ್'ನೃತ್ಯ ಪ್ರದರ್ಶನ ನೋಡುಗರ ಕಣ್ಮನ ಸೆಳೆಯಿತು.

ಭಿನ್ನ ವಿಭಿನ್ನವಾದ ಸಾಂಪ್ರದಾಯಿಕ ಶೈಲಿಯ ಉಡುಗೆ ತೊಡುಗೆಗನ್ನು ಧರಿಸಿ ನೃತ್ಯ ಮಾಡಿದ್ದು ವಿಶೇಷವಾಗಿತ್ತು.

ಶ್ರೀಮತಿ ಸುಮ ಎಂ.ಪಿ. ರೇಣುಕಾಚಾರ್ಯ, ನಗರ ಪಾಲಿಕೆ ಮಾಜಿ ಮಹಾಪೌರರೂ ಆದ ಹಾಲಿ ಸದಸ್ಯ ಬಿ.ಜಿ. ಅಜಯ್ ಕುಮಾರ್, ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಲೋಕಿಕೆರೆ ನಾಗರಾಜ್ ಹಾಗೂ ಇತರೆ ಗಣ್ಯರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಲೇಡಿಸ್ ಕ್ಲಬ್ ಸಂಸ್ಥಾಪಕರಾದ ಶ್ರೀಮತಿ ಅಮೀರಾ ಬಾನು, ಅಧ್ಯಕ್ಷರಾದ ವಿನೋದ ರಾಮದಾಸ್, ಉಪಾಧ್ಯಕ್ಷರಾದ ನಾಗರತ್ನ, ಚೇತನ ಶಿವಕುಮಾರ್, ಸಂಧ್ಯಾ ಕುರುಡೇಕರ್, ಕಾರ್ಯದರ್ಶಿ ಪದ್ಮಪ್ರಿಯಾ ಮತ್ತು ಇತರೆ ಪದಾಧಿಕಾರಿಗಳು, ಸದಸ್ಯರು, ವಿಶೇಷ ಆಹ್ವಾನಿತರು ನೃತ್ಯದಲ್ಲಿ ಭಾಗಿಯಾಗಿ ಸಂಭ್ರಮ ಹಂಚಿಕೊಂಡರು.

## ಏಳನೇ ವರ್ಷದ ಪುಣ್ಯಸ್ಮರಣೆ

ಜನನ : 1.6.1956



ಮರಣ : 12.10.2014

**ದಿ|| ಕೆ.ಜಿ.ಬಸವರಾಜಪ್ಪನವರು**

ನೇರ ನುಡಿ, ದಿಟ್ಟ ಹೆಜ್ಜೆ ಮತ್ತೆ-ಮತ್ತೆ ಮಾರ್ದನಿಸಿದಂತೆ, ಸ್ನೇಹ ಜೀವಿಯ ಸರಳತೆ ಮತ್ತೆ ಮತ್ತೆ ಕಾಡಿದಂತೆ ನಮ್ಮ ಜೀವನದಲ್ಲಿ ನಿಮ್ಮದೇ ಆದರ್ಶ ಕನಸುಗಳ ಸ್ಪರ್ಶ ಉರುಳೇ ಹೋಯಿತು ನೀವಿರದ ಈ ಏಳು ವರುಷ.

ನಿಮ್ಮ ನೆನಪಿನಲ್ಲಿ ....

ಶ್ರೀಮತಿ ಕೆ.ಜಿ. ಮಂಜುಳ
ಶ್ರೀಮತಿ ಶೃತಿ ಹಾಗೂ ಡಾ|| ಶಿವಶಂಕರಪ್ಪ ಎ.
ಚಿ|| ಶೋಭಿತ್ ಎಸ್. ಅಗ್ರಹಾರ ಮತ್ತು ಚಿ|| ಶ್ರೀಜಿತ್ ಎಸ್. ಅಗ್ರಹಾರ
ಹಾಗೂ ಬಂಧು-ಮಿತ್ರರು.

**ಬನಶ್ರೀ ಆರ್ಥೋ & ಟ್ರಾಮಾ ಕೇರ್**
# 546/2, 5ನೇ ಮೇನ್, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಸರ್ಕಲ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ. ಮೊ. : 94806 04676

## ವೈಕುಂಠ ಸಮಾರಾಧನಾ ಆಹ್ವಾನ ಪತ್ರಿಕೆ



ಶ್ರೀ ಅಣ್ಣಪ್ಪ ಎಸ್. ದಿವಾಕರ್ (ಹೆಗಡೆ)
ಜನನ: 13.10.1942
ಮರಣ : 30.09.2021

ಶ್ರೀಮತಿ ಶ್ರೀ ಪಾರ್ವತಮ್ಮ ದಿ|| ಅಣ್ಣಪ್ಪ ಸುಬ್ರಾಯ ದಿವಾಕರ್ ಮತ್ತು ಮಕ್ಕಳು ಹೂವಿನಹಡಗಲಿ ಇವರು ಮಾಡುವ ವಿಜ್ಞಾಪನೆಗಳು.
ನಮ್ಮ ಪೂಜ್ಯ ತಂದೆಯವರಾದ

**ಶ್ರೀ ಅಣ್ಣಪ್ಪ ಎಸ್. ದಿವಾಕರ್**

ಇವರು ದಿನಾಂಕ 30.9.2021ರ ಗುರುವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ತತ್ಸಂಬಂಧವಾದ

**ವೈಕುಂಠ ಸಮಾರಾಧನೆಯನ್ನು**

ದಿನಾಂಕ 13.10.2021ರ ಬುಧವಾರ ಮಧ್ಯಾಹ್ನ 1.30 ಗಂಟೆಗೆ ಹೂವಿನಹಡಗಲಿ ಶ್ರೀ ಶಾಂತವೀರ ಸಮುದಾಯ ಭವನದಲ್ಲಿ ನೆರವೇರಿಸಲು ನಿಶ್ಚಯಿಸಿರುತ್ತೇವೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಇಂತಿ ದುಃಖತಪ್ತರು
ಶ್ರೀ ಪಾರ್ವತಮ್ಮ ಎ. ದಿವಾಕರ್, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ದಿವಾಕರ್ ಬಂಧುಗಳು ಹಾಗೂ ದೈವಜ್ಞ ಬ್ರಾಹ್ಮಣ ಬಾಂಧವರು, ಹೂವಿನಹಡಗಲಿ
ಮೊ: 94422 11240, 94486 29120, 94496 22872, 99001 66790

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte